Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೮ | ಕಾರೀಕು ೩-೩-೧೯೩೦ನೇ ಶುಕ್ರವಾರ | ಸಂಚಿಕೆ ೪೦

ವಾರ್ತೆಗಳು.

'ಆಸಾಮನ್ನು ಗುಪ್ತ ಪಿತೂರಿಯಿಂದ ಪಾಕಿಸ್ತಾನಕ್ಕೆ ಕೂಡಿಸುವೆವು' ಎಂದು ಕೆಂಪು ಮಸಿಯಿಂದ ಬರೆದ ಭಿತ್ತಿ ಪತ್ರಗಳನ್ನು ಟನ್‌ಸುಕಿಯಾ ರೇಲ್ವೆ ಸಂಸ್ಥೆಯ ಗೋಡೆಗಳಿಗೂ ಗಾಡಿಗಳ ಮೇಲೆಯೂ ಅಂಟಿಸಲಾಗಿತ್ತು. ಈ ಎಲ್ಲ ಭಿತ್ತಿ ಪತ್ರಗಳನ್ನು ಸ್ಥಳೀಯ ಪೊಲೀಸರು ವಿಶೇಷವಾಗಿ ಸಿಕೊಂಡಿದ್ದು ಮುಂದಿನ ವಿಚಾರಣೆ ನಡೆದಿರುತ್ತದೆ.

ಮದ್ರಾಸು ಪ್ರಾಂತದ ಪುಡೂರ ಗ್ರಾಮದ ಬಳಿ ಆಡವಿಯಲ್ಲಿ ೩೫ ವರ್ಷದ ಪುರ್ವನನ್ನು ಯಾರೋ ಕೊಲೆ ಮಾಡಿದ್ದರು. ಅವನ ನಾಯಿ ಅಲ್ಲಿಯೇ ಅವನನ್ನು ಕಾಯುತ್ತಲಿತ್ತು. ವಿಷಯ ತಿಳಿದ ಬಳಿಕ ಪೊಲೀಸರು ಬಂದಾಗ ಆನಾಯಿ ತನ್ನ ಯಜಮಾನನ ಮನೆ, ಆವನು ಅರಿವೆ ಒಗೆಯಿಸಿಕೊಳ್ಳುತ್ತಿದ್ದ ಅಂಗಡಿ ಮೊದಲಾದ ಪನ್ನು ತೋರಿಸಿತಂತೆ.

ಮದ್ರಾಸು ಮಂತ್ರಿಗಳ ವಿರುದ್ಧ ಬಂದ ಆರೋಪಗಳ ವಿಚಾರಣೆಗಾಗಿ ನಿಯಮಿತವಾಗಿದ್ದ ತಿಮೂರ್ತಿ ಸಮಿತಿ (ರಾಜೇನ್ ಬಾಬು, ನೆಹರು, ಪಟೇಲ) ಯು ತನ್ನ ನಿರ್ಣಯವನ್ನು ಕೊಟ್ಟಿದ್ದು ಆದರಲ್ಲಿಯು ಆರೋಪಗಳನ್ನು ಕಿತ್ತುಹಾಕಿ ಈ ವಿಷಯವನ್ನು ಇಲ್ಲಿಗೇ ಬಿಟ್ಟುಬಿಡಬೇಕು ಎಂದು ಹೇಳಿರುತ್ತದೆ.

ಅವೇರಿಕೆಯ ಮಸ್ಸಾಚುಸೆಟ್ಸಿನ ಆಸ್ಪತ್ರೆಯೊಂದರಲ್ಲಿ ಅಟೆಂಡರನಾದವನೊಬ್ಬನು ಕಳೆದ ಮೂರು ವರ್ಷಗಳಿಂದ ಪ್ರಜ್ಞಾಹೀನನಾಗಿಯೇ ಬದುಕಿದ್ದಾನೆ. ಮೋಟಾರ್ ಅಪಘಾತದಿಂದ ತಲೆಯೊಡೆದಿದ್ದೇ ಇದಕ್ಕೆ ಕಾರಣ. ಪ್ರತಿ ದಿನವೂ ಅವನಿಗೆ ಕ್ಲಿಸ್ಟರ್ ಮಾಡಿಸಿ ಊಟಿಸಿ, ಒಟ್ಟಿ ತೊಡಿಸುತ್ತಾರಂತೆ!

ಭಾರತದ ಟಂಕ ಸಾಲೆಗಳಲ್ಲೀಗ ಮುದ್ರಾಂಕಿತ ಪ್ರಮಾಣದಲ್ಲಿ ತಯಾರಾಗುತ್ತಿರುವ ಹೊಸ ನಾಣ್ಯಗಳಲ್ಲಿ ಅರಸನ ಮತ್ತು ಕಿರೀಟದ ಚಿತ್ರಗಳ ಬದಲಿಗೆ ಆಶೋಕ ಸಿಂಹಗಳ ಚಿತ್ರಗಳು ಬರುವವು. ರೂಪಾಯಿ ನಾಣ್ಯದ ಮೇಲೆ ಧಾನ್ಯದ ಗುರುತೂ, ಎರಡಾಣೆ ಒಂದಾಣೆ ನಾಣ್ಯಗಳ ಮೇಲೆ ಹೋರಿಯ ಮತ್ತು ಕಾಲಾಣೆ ನಾಣ್ಯದ ಮೇಲೆ ಕುದುರೆಯ ಚಿತ್ರಗಳೂ ಇರುವುವು. ಇವು ೧೯೩೦ ಆಗಸ್ಟಿನಲ್ಲಿ ಚಲಾವಣೆಗೆ ಬರುವವು.

ಹಣಕಾಸಿನ ಕಾರಣದಿಂದ ಪಶ್ಚಿಮ ಕರಾವಳಿಯ ಮಲ್ಪೆ ಬಂದರನ್ನು (ದ. ಕ ಪ್ಪಡ) ದೊಡ್ಡ ಬಂದರವಾಗಿ ಬೆಳೆಸುವ ವಿಚಾರವನ್ನು ಬಿಟ್ಟು ಬಿಡಲಾಗಿದೆಯಂದೂ ಅನುಕೂಲ ಕಾಲಬಂದಾಗ ಆರ್ಥಿಕ ಹಾಗು ಇಂಜಿನಿಯರಿಂಗ್ ದೃಷ್ಟಿಯಿಂದ ಈ ಬಂದರದ ಪ್ರಶ್ನೆಯನ್ನು ಪುನಃ ಪರಿಶೀಲಿಸಬೇಕಾಗಿದೆಯೆಂದೂ ಸಾರಿಗೆ ಮಂತ್ರಿ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರರು ತಿಳಿಸಿದರು.

ಭಾರತದಿಂದ ಜಪಾನಕ್ಕೆ ಅಲ್ಲಿಂದ ಇಲ್ಲಿಗೂ ಕೆಲ ರೈತ ಕುಟುಂಬಗಳನ್ನು ಕಳಿಸುವ ಮತ್ತು ತರಿಸುವ ಮೂಲಕ ವ್ಯವಸಾಯದಲ್ಲಿ ಸುಧಾರಿತ ಪದ್ಧತಿಯ ಪ್ರತ್ಯಕ್ಷ ಶಿಕ್ಷಣವನ್ನು ರೈತರಿಗೆ ಕೊಡಿಸುವ ವಿಚಾರ ಕೇಂದ್ರ ಸರಕಾರಕ್ಕಿದೆಯೆಂದು ತಿಳಿಯುತ್ತದೆ.

ಪ್ರಸಿದ್ಧ ಆಂಗ್ಲ ಸಾಹಿತಿಯಾದ ಡಾ॥ ಸ್ಯಾಮುಯಲ್ ಜಾನ್‌ಸನ್, ಬೀದಿಯಲ್ಲಿ ಹೊರಟರೆ ಪ್ರತಿಯೊಂದು ಅಂಗಡಿ ಕಂಭವನ್ನೂ ಮುಟ್ಟಿಕೊಂಡು ಹೋಗುವ ಪದ್ಧತಿ. ಮಧ್ಯೆ ಆಕಸ್ಮಾತ್ ಯಾವುದಾದರೂ ಕಂಭವನ್ನು ಬಿಟ್ಟರೆ ಹಿಂತಿರುಗಿ ಮನೆಗೆ ಹೋಗಿ ಪುನಃ ಹೊರಡುತ್ತಿದ್ದನಂತೆ!

"ಭಾರತೀಯ ರೈತನ ಜೀವನಮಟ್ಟ ಏರಿದುದಿಲ್ಲ; ಅವನ ಆರ್ಥಿಕ ಪರಿಸ್ಥಿತಿಯೂ ಸುಧಾರಣೆ ಹೊಂದಿದುದಿಲ್ಲ" ಎಂಬುದಾಗಿ ಭಾರತ ಸರಕಾರದ ಮಜೂರ ಮಂತ್ರಿಮಂಡಲವು ಕಳೆದ ಏಪ್ರಿಲ್ ತಿಂಗಳಲ್ಲಿ ರಚಿಸಿದ ಕೃಷಿ ಮಜೂರ ವಿಚಾರಣಾ ಸಮಿತಿಯು ಅಭಿಪ್ರಾಯಪಡುತ್ತದೆ.

"ಸಂಯುಕ್ತ ಅಮೇರಿಕವು ಸೋವಿಯಟ್ ರಷ್ಯದೊಡನೆ ಶಾಂತಿಯುತವಾದ ಒಡಂಬಡಿಕೆಯ ಮಾತುಕತೆಗಳಿಗೆ ಸದಾ ಸಿದ್ಧವಿದೆ, ಆದರೆ ಮುಂದಿನ ಮುಖಂಡರ ಭೇಟಿ ನಡೆಯುವುದಿದ್ದರೆ ಮೊರ್ಲೆಲ್ ಸ್ಟೈಲಿನರು ವಾಷಿಂಗ್‌ಟನ್ ನಗರಕ್ಕೆ ಬರಬೇಕು" ಎಂಬುದಾಗಿ ಅಮೇರಿಕದ ಅಧ್ಯಕ್ಷ ಟ್ರೂಮನರು ವ್ಯಕ್ತಪಡಿಸಿರುವರು

ಭಾರತ ವಿಮೋಚ ದಳದ ನೂತನ ನಾಯಕರಾದ ಏರ್ ಮಾರ್ಷಲ್ ರೊನಾಲ್ಡ್ ಐವಲೊಚ್ಹಾಪ್‌ಮೆನ್‌ರವರು ತಾ. ೨೫ ರಲ್ಲಿ ಏರ್ ಮಾರ್ಷಲ್ ಸರ್ ಥಾಮಸ್ ಎಲ್ಮ್‌ಹರ್ಸ್ಟ್‌ರಿಂದ ಅಧಿಕಾರ ವಹಿಸಿಕೊಂಡರು. ಭಾರತವು ಸ್ವಾತಂತ್ರ್ಯವಾದ ದಿನಿಂದ ಭಾರತದ ವಿಮಾನ ದಳಕ್ಕೆ ಏರ್ ಮಾರ್ಷಲ್ ಸರ್ ಥಾಮಸ್ ಎಲ್ಮ್‌ಹರ್ಸ್ಟ್‌ರವರು ನಾಯಕರಾಗಿದ್ದು ಅವರೀಗ ಬ್ರಿಟನಿಗೆ ಹಿಂದಿರುಗಲಿರುವರು. ಅವರಿಗೆ ಭಾರತ ಸೇನಾಪಡೆಯ ಸುಮಾರು ೨೦೦ ಅಧಿಕಾರಿಗಳು ಒಂದು ಸತ್ಕಾರಕೂಟವನ್ನು ಏರ್ಪಡಿಸಿದ್ದರು.

ಹಿಂದಾಯ ರಾಷ್ಟ್ರೀಯ ಕಾಂಗ್ರೆಸ್ಸಿನ ವಾರ್ಷಿಕ ಅಧಿವೇಶನವು ಜೂನ್ ತಿಂಗಳ ಅಂತ್ಯದಲ್ಲಿ ಇಲ್ಲವೆ ಜುಲೈ ತಿಂಗಳ ಆರಂಭದಲ್ಲಿ ಬೆಂಗಳೂರಿನಲ್ಲಿ ಜರಗುವ ದೆಂದು ನಿರ್ಣಯವಾಗಿದೆ.

ಭಾರತ ಸರಕಾರವು ನಾಲ್ಕು ಲಕ್ಷ ರೂಪಾಯಿ ವೆಚ್ಚಮಾಡಿ ಒಂದು ತಂಬಾಕು ಸಂಶೋಧನಾ ಸ್ಟೇಷನನ್ನು ಬರುವ ಏಪ್ರಿಲ್ ತಿಂಗಳಲ್ಲಿ ದಭರ್ಂಗಾದಲ್ಲಿ ತೆರೆಯಲಿರುವುದು.

ಡಿಲ್ಲಿ, ಪಾಟ್ನಾ, ಟ್ರಿವೆಂಡ್ರಂ ಈ ಮೂರು ಕಡೆ ಕ್ಷಯರೋಗ ಪ್ರತಿಬಂಧಕ ಕೇಂದ್ರಗಳನ್ನು ತೆರೆಯಲು ಭಾರತ ಸರಕಾರ ನಿರ್ಧರಿಸಿದೆ.

ಪಾಕೇಸ್ತಾನದ ಕಾಬೂಲ್ ರಾಯಭಾರಿ ವಿ॥ ಐ. ಐ. ಚುಂದ್ರಿಗರ್ ಅವರನ್ನು ವಾಯವ್ಯ ಗಡಿನಾಡು ಪ್ರಾಂತ್ಯದ ಗವರ್ನರನ್ನಾಗಿ ನೇಮಿಸಲಾಯಿತು.

ಕಳೆದವಾರ ಒಂದುದಿನ ರಾತ್ರಿ ವಿ॥ ವಿನ್ಸ್‌ಟನ್ ಚರ್ಚಿಲ್ಲರು ನಿಧನ ಹೊಂದಿದ ರೆಂಬ ಸುದ್ದಿ ಲಂಡನ್ ನಗರದಲ್ಲಿ ಹರಡಿತ್ತು. ಹೊಳ ಚುನ್ನಾವಣೆಯ ಪ್ರಚಾರ ಗದ್ದಲದಲ್ಲಿ ಇದೂ ಒಂದು.

ಸುತ್ತಲೂ ಪಾಕೇಸ್ತಾನ ಪ್ರಾಂತ್ಯದಿಂದ ಆವರಿಸಲ್ಪಟ್ಟು ಭಾರತದಿಂದ ಪೃಥಕ್ಕರಿಸಲ್ಪಟ್ಟಂತೆ ಪ್ರಕೃತ ತೋರುವ ತ್ರಿಪುರಾ ಸಂಸ್ಥಾನವನ್ನು ರೈಲ್ವೇ ಸಂಬಂಧದ ಮೂಲಕ ಭಾರತಕ್ಕೆ ಕೂಡಿಸುವ ಯೋಜನೆಯೊಂದಿದೆ.

ಬರ್ಮಕ್ಕೆ ೫೦೦,೦೦೦ ಪವನು ಸಾಲ ಕೊಡಲು ಪಾಕಿಸ್ತಾನವು ಸಮ್ಮತಿಸಿದೆ ಎಂದು ಕರಾಚಿಯಿಂದ ಪ್ರಕಟಣೆ ಹೊರಬಿದ್ದಿದೆ.

ಬ್ರಿಟನ್ನಿನ ನೂತನ ಚಕ್ರಾವರ್ತಿಯಲ್ಲಿ ರಜನೆಯಾಗಲಿರುವ ಪಾರ್ಲಿಮೆಂಟಿನಲ್ಲಿ ಆದಷ್ಟು ಹೆಚ್ಚಿಗೆ ಸ್ತ್ರೀ ಸದಸ್ಯರಿರಬೇಕೆಂಬ ಸಲಹೆಗೆ ಜಾರ್ಜ್ ಬರ್ನಾರ್ಡ್ ಶಾರವರು ಬೆಂಬಲ ಕೊಟ್ಟಿರುತ್ತಾರೆ.

ಜಪಾನ್ ಮತ್ತು ಪಾಕೇಸ್ತಾನಗಳೊಳಗೆ ವ್ಯಾಪಾರ ಪಹಿವಾಟುಗಳನ್ನು ಯೋಚಿಸುವ ಯೋಜನೆಗಳನ್ನು ಹುಡುಕಲು ಹೋಕಾಗಿ ಎಂಟು ಮಂದಿ ಆರ್ಥಿಕ ತಜ್ಞರಿಂದೊಡಗೂಡಿದ ಶಿಷ್ಟಮಂಡಲವೊಂದು ಜಪಾನಿನಿಂದ ಇತ್ತೀಚೆಗೆ ಕರಾಚಿಗೆ ಬಂದಿರುವುದು.

ಜನತಾ ಅಧಿಕಾರಕ್ಕೆ ಸರಕಾರ ಬಂದಾಗಿನಿಂದ ಆಹಾರದ ಅಭಾವವನ್ನು ದೂರ ಬೇರೆ ಬೇರೆ ಉಪಾಯಗಳನ್ನು ಹುಡುಕುತ್ತಾ ಇರುವ ಸಮಯು ವಾರಕ್ಕೊಂದು ಉಪವಾಸದ ಉಪಾಯವನ್ನು ಆದಕ್ಕೆ ಸೂಚಿಸಿ ಅದನ್ನು ಕೈಕೊಳ್ಳಲು ಸಾರ್ವಜನಿಕರಿಗೆ ವಿನಂತಿಸಲಾಗಿದೆ. ಯೋಜನೆಯು ಪರವಾಗಿ ಸರಕಾರ ಮಾತ್ರವಲ್ಲ ನಮ್ಮ ಜನತಾ ಮುಂದಾಳುಗಳು ಸಹಾ ಬೆಂಬಲ ನೀಡಿದ್ದಾರೆ. ಈ ಮೂಲಕ ಆಹಾರವನ್ನು ಉಳಿಸುವುದು ಮಾತ್ರವಲ್ಲದೆ ಮನುಷ್ಯನ ಆರೋಗ್ಯಕ್ಕೂ ತುಂಬಾ ಪ್ರಯೋಜನ ಉಂಟಾಗಲಿದೆ.

ಜಗತ್ತಿನಲ್ಲಿ ಅತ್ಯಂತ ಕಡಿಮೆ ಹಾಲ ಬಳಸುವ ಜನರೆಂದರೆ ಇಂಡೋನೇಷ್ಯನರು. ಅವರಲ್ಲಿ ಸರಾಸರಿ ಹಾಲಿನ ಖರ್ಚು ತಲಾ ದಿನ ಒಂದರ ಒಂದು ಪೆನ್ಸಿಗಿಂತಲೂ ಕಡಿಮೆ. ಈ ವಿಷಯವು ಇತ್ತೀಚೆಗೆ ಲಕ್ನೋದಲ್ಲಿ ಜರಗಿದ ಎಫ್. ಎ. ಓ. ಪರಿಷತ್ತಿನಲ್ಲಿ ವ್ಯಕ್ತವಾಯಿತು.

ಜಾಲಿಯನ್‌ವಾಲಾ ಬಾಗ್ ಸ್ಮಾರಕ ದಿನವು ಬರುವ ಏಪ್ರಿಲ್ ತಾ. ೧೩ ರಲ್ಲಿ ಅಮೃತಸರದಲ್ಲಿ ಆಚರಿಸಲ್ಪಡುವದು. ಜಾಲಿಯನ್‌ವಾಲಾ ಬಾಗ್‌ದಲ್ಲಿ ೧೯೧೯ ರಲ್ಲಿ ಜೀವಾರ್ಪಣೆ ಮಾಡಿದ ಹುತಾತ್ಮರ ಸ್ಮರಣೆಯನ್ನು ಚಿರಸ್ಥಾಯಿಗೊಳಿಸುವ ಉಪಾಯಗಳನ್ನು ಕಲ್ಪಿಸುವುದಕ್ಕಾಗಿ ಆ ಸಮಯದಲ್ಲೇ ಒಂದು ಪರಿಷತ್ತು ಜರಗಲಿದೆ.

ವ್ಯವಸಾಯಗಾರರಿಗೆ ಆರುವಿಕೆ

ಮಳೆಗಾಲದಲ್ಲಿ ಕೆಲವು ಕಡೆ ಗ್ರಾಮದಿಂದ ಗ್ರಾಮಕ್ಕೆ ಪಹಿವಾಟುಗಳಿಗೆ ಸರಿಯಾದ ಅನುಕೂಲತೆ ಇಲ್ಲದಿರುವುದರಿಂದ ರೈತರಲ್ಲಿ ಹೆಚ್ಚು ಜನರು ಹೆಚ್ಚು ಆಹಾರವನ್ನು ಬೆಳೆಸುವ ಯೋಜನೆ ಪ್ರಕಾರ ಕೊಡುವ ರಿಯಾಯಿತಿಗಳನ್ನು ಪಡೆದುಕೊಂಡಿಲ್ಲವೆಂಬುದು ಸರಕಾರದ ಅವಗಾಹನೆಗೆ ಬಂದಿದೆ. ಈ ರೈತರಿಗೆ ಸಹಾಯ ಮಾಡುವ ಉದ್ದೇಶದಿಂದ ಸ್ವಲ್ಪ ಗೊಬ್ಬರವನ್ನು ಅವರಿಗೆ ಹಂಚಲು ಸಂಗ್ರಹಿಸಿ ಇಡಲ್ಪಟ್ಟಿದೆ. ದೇವನೂರು, ನಿಟ್ಟೂರು, ಕಾನೂರು, ಮರಿನಾಡು, ನಾಪೋಕ್ಲು, ಕಕ್ಕಬೆ, ಸಾರಾಣೆ ಮತ್ತು ಸೂರ್ಲಬಿ ಗರ್ವಾಲೆ ಅವುಗಳ ಸುತ್ತುಮುತ್ತಲಿನ ಗ್ರಾಮದ ಜನರು ಆವರವರಿಗೆ ಬೇಕಾದ ಗೊಬ್ಬರಗಳಿಗೆ ತಾನು ಸಾಗುವಳಿ ಮಾಡುವ ಭೂಮಿಯ ವಿಸ್ತೀರ್ಣವನ್ನು ತೋರಿಸಿ ಅರ್ಜಿಗಳನ್ನು ಮಾರ್ಚ್ ೧೫ ರ ಒಳಗೆ ವ್ಯವಸಾಯ ಇಲಾಖಾ ಆಫೀಸರಿಗೆ ತಲಪುವಂತೆ ಕಳುಹಿಸಬೇಕು. ಹಾಗೆಯೇ ಶನಿವಾರ ಸಂತೆ ಹೋಬಳಿಯಲ್ಲಿ ಬಿತ್ತನೆ ಬೆಳೆಗಾಗಿ ಬೇಕಾದೆ ಗೊಬ್ಬರಕ್ಕೂ ಅರ್ಜಿಯನ್ನು ಕಳುಹಿಸಬಹುದೆಂದು ವ್ಯವಸಾಯ ಇಲಾಖಾ ಮುಖ್ಯಾಧಿಕಾರಿಗಳು ಸರ್ವರಿಗೂ ಈ ಮೂಲಕ ತಿಳಿಯಪಡಿಸಿರುತ್ತಾರೆ.

ಬೇಕಾಗಿದೆ

ಜಂಗಲ್ ಕಾಕ್ ನೆಕ್ಸ್

ದೊಡ್ಡ ನೆಕ್ಕುಗಳು—ಸೈಜು ಸುಮಾರು 6 ಇಂಚು × 4 ಇಂಚಿನವುಗಳಿಗೆ ಪ್ರತಿಯೊಂದರ ರೂ. ೧/-೦-೦ ತೆ ಕ್ರಯ ಕೊಡಲಾಗುವದು. ಚಿಕ್ಕವಕ್ಕೆ ದಾಮು ಶಾಯಿ ಮೇರೆ ಬೆಲೆ ಕೊಡಲಾಗುವದು. ಇವುಗಳನ್ನು ರಿಜಿಸ್ಟರ್ಡ್ ಪಾರ್ಸೆಲುಗಳ ಮೂಲಕ ಈ ಕೆಳಗಿನ ಅಡ್ರೆಸ್ಸಿಗೆ ಕಳುಹಿಸಿರಿ. ಅವುಗಳ ಬೆಲೆಯನ್ನು ಮನಿಯಾರ್ಡರು ಮೂಲಕ ಮರು ಟಪಾಲಿನಲ್ಲಿ ನಿಮಗೆ ದೊರೆಯುವದು.

D. H. Thangam & Co.,
82. Thambu Chetty Street,
4-1 G. T. Madras.

ವ್ಯಾಯಾಮದ ಅವಶ್ಯಕತೆ.

(ಶ್ರೀ. ಎಂ. ಜಿ. ಪುಟ್ಟಣ್ಣ)

ದೇಹಾರೋಗ್ಯಕ್ಕೆ ವ್ಯಾಯಾಮವು ಅತ್ಯಾವಶ್ಯಕವಾಗಿರುತ್ತೆ. ಇದರ ಅವಶ್ಯಕತೆಯನ್ನು ತೀರ್ಮಾನಿಸಲು ಅಸಾಧ್ಯ. ಇದು ದೇಶದ ಉನ್ನತಿಗೆ ಮೂಲಸ್ವರೂಪವೆಂದರೆ ಅತಿಶಯೋಕ್ತಿಯಾಗಲಾರದು. ಪ್ರತಿಯೊಬ್ಬರಿಗೂ ವ್ಯಾಯಾಮವು ಬೇಕೇ ಬೇಕಾಗಿರುತ್ತೆ. ನಮ್ಮ ದೇಶದ ದೇಹಾರೋಗ್ಯವು ಈ ದಿನ ನೋಡಿದರೆ ಪಾಶ್ಚಿಮಾತ್ಯ ದೇಶಗಳಿಗಿಂತ ಬಹಳ ಮಟ್ಟಿಗೆ ಕೆಳಗಿನ ಅಂತಸ್ತಿನಲ್ಲಿದೆ. ವ್ಯಾಯಾಮದ ಗುಟ್ಟನ್ನು ಅರಿತೇ ಪಾಶ್ಚಿಮಾತ್ಯರು ಕೆಲವು ವರ್ಷಗಳಿಂದೀಚೆಗೆ ಹೆಚ್ಚು ಗಮನವನ್ನು ಕೊಟ್ಟು ತಮ್ಮ ದೇಶಗಳಲ್ಲಿ ವ್ಯಾಯಾಮ ಶಾಲೆಗಳನ್ನು ಹೆಚ್ಚು ಹೆಚ್ಚಾಗಿ ಪ್ರೋತ್ಸಾಹಿಸಿ ಪ್ರತಿಯೊಬ್ಬರೂ ವ್ಯಾಯಾಮವನ್ನು ಮಾಡಲು ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಆದುದರಿಂದಲೇ ಅವರ ದೇಶಗಳಲ್ಲಿ ಹೆಚ್ಚಿನ ಆರೋಗ್ಯ ಸಂಪತ್ತು ತಲೆದೋರಿರುತ್ತೆ. ನಮ್ಮಲ್ಲಿ ಇನ್ನೂ ಆಕಾಂಕ್ಷೆ ಗಮನಗಳು ಹುಟ್ಟಿಲ್ಲ ಎಲ್ಲೋ ಅಲ್ಪ ಸ್ವಲ್ಪ ಮಟ್ಟಿಗೆ ಜನರು ವ್ಯಾಯಾಮದ ಆವಶ್ಯಕತೆ ತಿಳಿದು ಆಚರಿಸುತ್ತಿದ್ದಾರೆ. ಆದರೆ ಇದು ಸಾಲದು. ದೇಶವು ಬಲವಾಗಿರಬೇಕಾದರೆ ಜನಾಂಗವು ಸಹ ಬಲವಾಗಿರಬೇಕು. ಬಲಹೀನ ಜನಾಂಗವು ಬಲವುಳ್ಳ ದೇಶವನ್ನು ಹೇಗೆ ತಾನೇ ಕಟ್ಟೀತು? ಅಲ್ಲದೆ ತನ್ನ ಜೀವನೋಪಾಯವನ್ನು ಒದಗಿಸಿಕೊಳ್ಳಲಿಕ್ಕೆ ದೇಹಾರೋಗ್ಯವೂ ದೃಢಕಾಯತ್ವವೂ ಅತ್ಯಾವಶ್ಯಕವಾಗಿರುತ್ತವೆ. ಇದರಿಂದ ದೇಶದ ಆರ್ಥಿಕ, ಸಾಮಾಜಿಕ ಸಂಪತ್ತು ಕೂಡ ಹೆಚ್ಚುತ್ತೆ. ಉದಾಹರಣೆ ಎಂದರೆ–ಒಬ್ಬ ಕೆಲಸಗಾರನು ಕೆಲಸಕ್ಕೆ ಹೋಗದಿದ್ದರೆ ತನಗೆ, ನಷ್ಟವಲ್ಲದೆ ತನ್ನ ಮೂಲೀಕರಿಗೂ, ಕೊನೆಯದಾಗಿ ದೇಶದ ಆರ್ಥಿಕ ಸ್ಥಿತಿಗೂ ಕಂದಕವಾಗುತ್ತೆ. ಅದುದರಿಂದ ಪ್ರತಿಯೊಬ್ಬರು ಆರೋಗ್ಯಶಾಲಿಗಳಾಗಿಯೂ ದೃಢಕಾಯರಾಗಿಯೂ ಆಗಬೇಕು. ಇದು ಮನುಷ್ಯನ ಆದ್ಯ ಕರ್ತವ್ಯವಾಗಿದೆ. ಇದನ್ನು ಪಡೆಯಬೇಕಾದರೆ ವ್ಯಾಯಾಮವೇ ವರ್ಗ.

ಕೆಲವರು ಹೀಗೆ ಭಾವಿಸಬಹುದು:–ವ್ಯಾಯಾಮದಿಂದ ದೇಹದಲ್ಲಿ ಅಲಸ್ಯ, ಬುದ್ಧಿ ಹೀನತೆಗಳೂ ಉಂಟಾಗಬಹುದೆಂಬ ಶಂಕೆ ಇರಬಹುದು–ಆದರೆ ಇದು ತಪ್ಪು ತಿಳುವಳಿಕೆ. ವ್ಯಾಯಾಮವನ್ನು ಸರಿಯಾದ ರೀತಿಯಲ್ಲಿ ಮಾಡಿದರೆ ದೇಹದ ಅಂಗಾಂಗಗಳೂ ಬಲಗೊಳ್ಳುವುದಲ್ಲದೆ, ಮೇಧಾಶಕ್ತಿಯು ಪರಿಪೂರ್ಣವಾಗಿ ಹೆಚ್ಚುವುದರಲ್ಲಿ ಸಂಶಯವಿಲ್ಲ. ಒಟ್ಟಿನಲ್ಲಿ ಹೇಳಿದರೆ ಜೀವನದಲ್ಲಿ ಒಂದು ಹುರುಪನ್ನು ಹುಟ್ಟಿಸಿ, ಸುಖ ಶಾಂತಿ ಸಮೃದ್ಧಾನಗಳನ್ನು ಕೊಟ್ಟು ಜೀವನವನ್ನು ಸಂತೋಷದಾಯಕವಾಗಿ ಮಾಡುತ್ತದೆ. ಅಲ್ಲದೆ ನಮ್ಮ ಮುಂದಿನ ಜನಾಂಗದವರು ಕೂಡ ಬಲಶಾಲಿಗಳಾಗಿಯೂ, ದೃಢಕಾಯರಾಗಿಯೂ ದೇಶಕ್ಕೆ ಹೆಚ್ಚು ಸೇವೆಯನ್ನು ಅರ್ಪಿಸಲು ಅರ್ಹರಾಗುವರು.

ದೇಹವು ಒಂದು ದೇವಸ್ಥಾನ. ಆತ್ಮ ಸ್ವರೂಪನಿಂದಿರುವ ದೇವರು ವಾಸ ಮಾಡುವ ನೆಲೆ. ಇದನ್ನು ಎಷ್ಟು ಶುಭ್ರವಾಗಿಯೂ ಆಚ್ಚುಕಟ್ಟಾಗಿಯೂ ಇಡಬೇಕೆಂಬುದನ್ನು ತಾವೇ ಊಹಿಸಿರಿ? ಸರಿಯಾದ ರೀತಿಯಿಂದ ಚಿಕ್ಕ ವಯಸ್ಸಿನಿಂದಲೂ ವ್ಯಾಯಾಮ ಮಾಡಿಕೊಂಡು ಬಂದರೆ ಯಾವ ರೋಗಕ್ಕೂ ಅವ್ಕಾಶ ಕೊಡವುದಿಲ್ಲ. ಇದು ಸಿದ್ಧಾಂತದ ಮಾತು. ವ್ಯಾಯಾಮಕ್ಕೆ ದಿನವೆಲ್ಲಾ ದುಡಿಯಬೇಕಾಗಿಲ್ಲ. ಕೆಲವು ನಿಮಿಷಗಳನ್ನು ಮಾತ್ರ ಇದಕ್ಕಾಗಿ ಇಟ್ಟರೆ ಸಾಕು. ಇದಕ್ಕೇನು ಹಣ ಕಾಸು ಖರ್ಚಿಲ್ಲ. ಒಳ್ಳೆ ಗಾಳಿ ಸೇವಿಸಲು ಸೂರ್ಯರಶ್ಮಿ ಹೊಂದಲು ಮತ್ತು ಕೈಕಾಲುಗಳಿಗೆ ವ್ಯಾಯಾಮ ಕೊಡಲು ಏನಾದರೂ ಖರ್ಚಾಗುವುದೆ? ಆದರೆ ಇದಕ್ಕೆ ಮುಖ್ಯವಾಗಿ ಉದ್ದಿಶ್ಯ ಮತ್ತು ಮನಸ್ಸು ಬೇಕಾಗಿರುತ್ತೆ.

ವ್ಯಾಯಾಮವನ್ನು ಯಾರು ಬೇಕಾದರೂ ಮಾಡಬಹುದು–ಏಳು ವಯಸ್ಸಿನ ಬಾಲಕನಿಂದ ೭೦ ವಯಸ್ಸಿನ ವೃದ್ಧರೂ ಮಾಡಬಹುದು. ಅವರವರ ವಯಸ್ಸಿಗೆ ತಕ್ಕಂತೆ ವ್ಯಾಯಾಮವನ್ನು ತೆಗೆದುಕೊಳ್ಳಬೇಕು. ವ್ಯಾಯಾಮವನ್ನು ಮಾಡುವುದರಲ್ಲಿ ಒಂದು ವಿಧಾನವಿದೆ.

ಪ್ರತಿಯೊಬ್ಬರೂ ವ್ಯಾಯಾಮವನ್ನು ಮಾಡಬೇಕೆಂದು ಸಂಕಲ್ಪವನ್ನು ಇಂದೇ ಮಾಡಿರಿ. ಇದಕ್ಕೇನು ವ್ಯಾಯಾಮ ಶಾಲೆಗಳಿಗೆ ಹೋಗಿಯೇ ಮಾಡಬೇಕಾಗಿಲ್ಲ. ನೀವು ಕೂತಿರುವಲ್ಲಿ ಅಥವಾ ತಾವು ಇಷ್ಟಪಟ್ಟ ಜಾಗಗಳಲ್ಲಿಯೇ ಮಾಡಬಹುದು. ಆದರೆ ವ್ಯಾಯಾಮ ಮಾಡುವ ಸ್ಥಳಗಳಲ್ಲಿ ಸ್ವಲ್ಪ ಗಾಳಿ ಬೆಳಕಿಗೆ ಅವಕಾಶವಿರಬೇಕು.

ಇದರ ಪ್ರಯೋಜನಗಳನ್ನು ಅನುಭವಿಸಿಯೇ ತಿಳಿಯಬೇಕಾಗಿದೆ. ಇದರ ಪ್ರಾಮುಖ್ಯವನ್ನು ಆಗಲೇ ತಿಳಿಯಲು ಸಾಧ್ಯ. ದೇವರು ತನ್ನ ವಾಸಕ್ಕಾಗಿ ನಿರ್ಮಾಣಿಸಿದ ಈ ಪವಿತ್ರವಾದ ದೇಹವನ್ನು ಭವ್ಯವಾಗಿಯೂ, ಶುಚಿಯಾಗಿಯೂ ಇಟ್ಟು ದೇವರ ಇಷ್ಟಕ್ಕನುಸಾರವಾಗಿ ನಡೆದುಕೊಂಡು ಇಹಪರ ಸಾಧನೆ ಮಾಡುವೆವೆಂಬ ಭಾವನೆಯಿಂದ ಈ ಲೇಖನವನ್ನು ಬರೆದಿರುತೇನೆ.

(ಮೈಸೂರು ಆರೋಗ್ಯ ಪತ್ರಿಕೆಯಿಂದ)

ಕಮ್ಯೂನಿಸ್ಟ್ ಉಪಟಳ

ಭಾರತದಲ್ಲಿ ಪ್ರಜಾ ಪ್ರಭುತ್ವ ಸಂಸ್ಥೆಗಳನ್ನು ಕಮ್ಯೂನಿಸ್ಟ್ ಉಪಟಳದಿಂದ ರಕ್ಷಿಸುವ ಸಲುವಾಗಿ ಸರ್ದಾರ್ ಪಟೇಲರು ಮಂಡಿಸಿದ್ದ ಪ್ರಿವೆಂಟಿವ್ ಡಿಟೆನ್ಷನ್ ಮಸೂದೆಯನ್ನು ಪಾರ್ಲಿಮೆಂಟು ತಾ. ೨೫ ರಲ್ಲಿ ಅಂಗೀಕರಿಸಿತ.

'ಈ ಮಸೂದೆಯು, ಈ ಬಗ್ಗೆ ಹೈಕೋರ್ಟುಗಳ ತೀರ್ಪುಗಳಿಂದ ಸಂದೇಹವುಂಟಾಗಿರುವುದರಿಂದ ತ್ಯವಾಯಿತು' ಎಂದು ಸರ್ದಾರ್ ಪಟೇಲರು ಹೇಳಿದರು.

ಈ ಮಸೂದೆಯನ್ನು ತಯಾರಿಸಲು ತಾವು ಎರಡು ದಿನಗಳ ಕಾಲ ನಿದ್ದೆಗೆಟ್ಟಿದ್ದುದಾಗಿ ಸರ್ದಾರ್ ಪಟೇಲರು ಹೇಳಿದರು. 'ನನ್ನ ಲಕ್ಷಾಂತರ ಜನರ ತ್ಯಾಗ ಮತ್ತು ಕಷ್ಟಗಳ ಫಲವಾಗಿ ಕಾರ್ಯರೂಪಕ್ಕೆ ಬಂದ ಈ ರಾಷ್ಟ್ರದ ಉಳಿವಿಗೂ ಭದ್ರತೆಗೂ ನೆನ್ನೆದಿಗೂ ಭಾರತದ ಕನ್ಯೂನಿಸ್ಟರು ಮುಳಿವಾಗಿದ್ದಾರೆ. ಭಾರತದ ಸ್ವಾತಂತ್ರ್ಯವನ್ನು ನಾವು ಉಳಿಸದೇ ಹೋದರೆ ಅದಕ್ಕಾಗಿ ಮಡಿದವರ ಮತ್ತು ದುಡಿದವರ ಸೇವೆಗೆ ದ್ರೋಹ ಬಗೆದಂತಾಗುವುದು. ವಿದೇಶೀ ರಾಷ್ಟ್ರಗಳಿಗೆ ಮತ್ತು ಸಂಸ್ಥೆಗಳಿಗೆ ತಮ್ಮನ್ನು ಮಾರಿಕೊಂಡಿರುವ ಈ ಕಡಿಮೆ ಸಂಖ್ಯೆಯ ಜನರ ಸಲುವಾಗಿ ಈ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವುದೆಂದರೆ ಆತ್ಮವಂಚನೆ" ಎಂದು ಸರ್ದಾರರು ಹೇಳಿದರು.

ಈ ಮಸೂದೆಯ ಬಗ್ಗೆ ಐದು ಗಂಟೆಗಳ ಕಾಲ ತೀವ್ರ ಚರ್ಚೆಯಾದ ನಂತರ ಮಸೂದೆಯು ಅಂಗೀಕೃತವಾಯಿತು. ಚರ್ಚೆಯ ಸಮಯದಲ್ಲಿ ಮಸೂದೆಯ ಬೆಂಬಲಿಗರಲ್ಲಿ ಒಬ್ಬರು ಮಸೂದೆಯನ್ನು ಟೀಕಿಸಿದ ಒಬ್ಬರನ್ನು 'ನಿಮಗೆ ನಾಚಿಕೆಯೂ ಆಗುವುದಿಲ್ಲವೆ?' ಎಂದು ಸಂಬೋಧಿಸಿದರು. ಆ ರೀತಿ ಹೇಳುವುದು 'ಅನ್ ಪಾರ್ಲಿಮೆಂಟರಿ' ಎಂದು ಅಧ್ಯಕ್ಷರು ನುಡಿದರು.

'ಈ ಮಸೂದೆಯು ರಾಜ್ಯಾಂಗದ ಆಶಯಕ್ಕೂ ವ್ಯಾಪ್ತಿಗೂ ಅನುಗುಣವಾಗಿದೆ. ೧೯೫೧ ಏಪ್ರಿಲ್ ೧ನೇ ತಾರೀಕು ಈ ಕಾನೂನೂ ಡಿಟೆನ್ಷನ್ನುಗಳೂ ಮುಕ್ತಾಯವಾಗುವುವು' ಎಂದು ಅಟಾರ್ನಿ ಜನರಲ್ ಶ್ರೀ ಎಂ. ಸಿ ಸೆಟಲ್ವಾಡರು ಹೇಳಿದರು.

ಬಸ್ ಕೆಲಸಗಾರರ ಮುಷ್ಕರ.

ಮೋಟಾರು ಕೆಲಸಗಾರರ ಸಂಬಳ ಮಾನ್ಯತಾ ಬೆತ್ತೆಯ ವಿಚಾರ ತಕರಾರಿದ್ದು ಇದನ್ನು ಮಧ್ಯಸ್ಥ ಸರಕಾರವು ಪರಿಶೀಲಿಸಿ ಒಂದು ಎವಾರ್ಡನ್ನು ಕೊಟ್ಟಿತು ಈ ಎವಾರ್ಡಿನ ಪ್ರಕಾರ ಸಿ. ಪಿ. ಸಿ. ಕಂಪೆನಿಯೂ ತನ್ನ ಕೆಲಸಗಾರರಿಗೆ ರೂ. ೯೦೦೦, ವನ್ನೂ, ಕೆನರಾ ಪರ್ಕ್ಯಾಷಪಿನವರು ರೂ. ೫೦,೦೦೦ ವನ್ನೂ, ಸಿ. ಪಿ. ಸಿ. ಯ ಇತರ ಅಧೀನ ಸಂಸ್ಥೆಗಳು ಸುಮಾರು ೫೦೦೦ ವನ್ನೂ ಕೊಡಬೇಕಿತ್ತು. ಈ ಸಂಸ್ಥೆಗಳು ಈ ಹಣವನ್ನು ಕೊಡಲು ತಯಾರಿರುವದಾಗಿಯೂ ಆದರೆ ಇದರಿಂದಾಗುವ ನಷ್ಟವನ್ನು ಭರ್ತಿಮಾಡಲು ಟಿಕೀಟು ದರಗಳನ್ನು ಹೆಚ್ಚಿಸಲು ಅನುಮತಿ ಕೊಡಬೇಕೆಂದೂ ಸರಕಾರವನ್ನು ಕೇಳಿದ್ದರು. ಸರಕಾರವು ಈ ಕೇಳಿಕೆಯನ್ನು ನಿರಾಕರಿಸಿದೆ. ಈ ಕಾರಣದಿಂದ ಕೆಲಸಗಾರರ ಕೇಳಿಕೆಯು ಪಲ್ಲಿಸಲ್ಪಡದ್ದರಿಂದ ಕೆಲಸಗಾರರು ತಾರೀಕು ೨೨–೨–೫೧ ರಿಂದ ಮುಷ್ಕರ ಹೂಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಆವ್ಯಂತ ಬಸ್ ಸಂಚಾರ, ಮೋಟಾರು ಟಪಾಲು ವ್ಯವಹಾರ ಕೂಡ ನಿಂತು ಹೋಗಿದೆ. ಪೋಲೀಸ್ ವಾಹನಗಳಲ್ಲಿ ಟಪಾಲನ್ನು ಕಳುಹಿಸಲಾಗುತ್ತಿದೆ.

ಅಲ್ಲಲ್ಲಿ ಮುಷ್ಕರಗಾರರು ಹಿಂಸಾಪ್ರವೃತ್ತಿಗಿಳಿದಿರುವ ವಾರ್ತೆಗಳೂ ಇವೆ ಕೆಲವು ಸ್ವಾಮಿಭಕ್ತ ಕೆಲಸಗಾರರು ತಮ್ಮ ಯಜಮಾನರ ಆಜ್ಞೆಯಂತೆ ಕೆಲಸಕ್ಕೆ ಹೋಗಲು ಯತ್ನಿಸಿದ್ದು ಬಸ್ ಓಡಾಡಿಸಲು ತಯಾರಿದ್ದರಿಂದೂ ಅಂಥವರನ್ನು ಹಿಡಿದು ಬಸ್ಸಿನಿಂದ ಕೆಳಗಿಳಿಸಿ ಬಸ್ಸಿಗೂ ಅನಾಹುತ ನೂಡಿದ ನಿದರ್ಶನವಿದೆಯೆಂದೂ ವಾರ್ತೆಗಳಿವೆ ಮುಷ್ಕರ ಪ್ರಾರಂಭವಾದ ಪ್ರಥಮ ದಿನವೇ ೧೧೦ ಜನರ ಬಸ್ಸಗಿಯಾಗಿದೆ. ಮಂಗಳೂರಿನಲ್ಲಿ ೧೪೪ ನೇ ಸೆಕ್ಷನ್ ಜಾರಿ ನೂಡಲಾಗಿದೆ. ಆದರೂ ಈ ನಿಯಮವನ್ನು ಉಲ್ಲಂಘಿಸಿ ಸಭೆ ಮೆರವಣಿಗೆ ನಡೆದಿವೆ. ಪೊಲೀಸರು ಶಾಂತರಾಗಿದ್ದಾರೆಂದು ತಿಳಿಯಬಂದಿದೆ.

ಮುಷ್ಕರ ನಡೆಯುತ್ತಿದೆ. ಮುಷ್ಕರದಿಂದಾಗಿ ಮಂಗಳೂರು ಮತ್ತು ಕೊಡಗಿನ ಸಂಬಂಧವು ತಪ್ಪಿದಂತಾಗಿದೆ. ಇಲ್ಲಿಂದ ಯಾವ ಲೈನುಗಳೂ ಹೋಗುತ್ತಿಲ್ಲ. ಕೊಡಗಿನಿಂದ ಸಂಪಾಜೆಯ ವರೆಗೆ ಹೋದ ಬಸ್ಸುಗಳು ಹಿಂದಕ್ಕೆ ಬಂದಿವೆ. 'ಈ ರೀತಿ ಸಂಬಂಧವು ತಪ್ಪಿ ವಿಪರೀತ ಪರಿಸ್ಥಿತಿಯುಂಟಾಗಿದೆ. ಕೆಲಸಗಾರರ ನ್ಯಾಯವಾದ ಬೇಡಿಕೆಯನ್ನು ಪಲ್ಲಿಸಲು ಸರಕಾರವೂ, ಮೂಲೀಕರು ಸಹಕರಿಸಬೇಕು.

ಲೇಬರ್ ಪಕ್ಷ ಜಯಭೇರಿ

ಬ್ರಿಟನಿನ ಚುನಾವಣೆಯು ತಾ. ೨೩ ರಲ್ಲಿ ನಡೆದು ಫಲಿತಾಂಶವು ಹೊರಬಿದ್ದಿದೆ. ಪಾರ್ಲಿಮೆಂಟಿನ ಒಟ್ಟು ೬೩೫ ಸ್ಥಾನಗಳ ಪೈಕಿ ೩೧೫ ಸ್ಥಳಗಳು ಈ ವರೆಗೆ ಬ್ರಿಟನಿನ ಆಡಳಿ ನಡೆಸುತ್ತಿದ್ದ ಲೇಬರ್ ಪಕ್ಷದವರಿಗೂ, ೨೫೪ ಸ್ಥಳಗಳು ಪಾರ್ಟ್ಲಿಗಳನ್ನು ಕೂಡಿದ ಕನ್ಸರ್ವೇಟಿವ್ ಪಕ್ಷದವರಿಗೂ, ೯ ಸ್ಥಳಗಳು ಲಿಬರಲ್ ಪಕ್ಷಕ್ಕೂ, ಎರಡು ಐರಿಷ್ ರಾಷ್ಟ್ರೀಯತ್ವವಾದಿಗಳಿಗೂ, ದೊರಕಿದೆ. ಉಳಿದ ಒಂದು ಸ್ಥಳಕ್ಕೆ ಮಾರ್ಚ್ ೮ರಲ್ಲಿ ಚುನಾವಣೆಯಾಗುವದು. ಇವರಿಂದ ಲೇಬರ್ ಪಕ್ಷವು ಅಲ್ಪ ಬಹುಮತವನ್ನು ಪಡೆದು ತನ್ನ ಸ್ಥಾನವನ್ನು ಉಳಿಸಿಕೊಂಡಿತ್ತು.

ಈ ಚುನಾವಣೆಯಲ್ಲಿ ಎಂದೂ ಇಲ್ಲದಷ್ಟು ಜನರು ಭಾಗವಹಿಸಿದ್ದರು. ಲೇಬರ್ ಪಕ್ಷವು ೧,೩೬,೧೯,೪೦೦ ಜನರ ಮತವನ್ನೂ, ಕನ್ಸರ್ವೇಟಿವ್ ಪಕ್ಷವು ೧,೩೬,೦೪,೮೧೧ ಜನರ ಮತವನ್ನೂ ಲಿಬರಲ್ ಪಕ್ಷವು ೭೬,೧೦,೨೬೨ ಜನರ ಮತವನ್ನೂ ಕಮ್ಯೂನಿಷ್ಟ್ ಪಕ್ಷವು ೧೧,೭೬೪ ಜನರ ಮತವನ್ನೂ ಪಡೆದವು. ಕಮ್ಯೂನಿಸ್ಟ್ ಪಕ್ಷಕ್ಕೆ ಇಷ್ಟ ಮತಗಳು ದೊರೆತರೂ ಒಂದೇ ಒಂದು ಸ್ಥಳದಲ್ಲಿ ಅವರ ಪ್ರತಿನಿಧಿಗಳು ಆರಿಸಿ ಬಂದಿರುವುದಿಲ್ಲ. ಹಿಂದಿನ ಶಾಸನ ಸಭೆಯಲ್ಲಿ ಅವರಿಗಿದ್ದ ಸ್ಥಾನವನ್ನೂ ಕಳಕೊಂಡರು.

ನಿರ್ಣಯವಾಗಿರುವ ಚುನಾವಣೆಯಲ್ಲಿ ಲೇಬರ್ ಪಕ್ಷಕ್ಕೆ ೩೬೩ ಸ್ಥಾನಗಳೂ, ಕನ್ಸರ್ವೇಟಿವ್ ಪಕ್ಷಕ್ಕೆ ೧೮೪ ಸ್ಥಾನಗಳೂ, ಲಿಬರಲ್ ಪಕ್ಷಕ್ಕೆ ೧೨ ಸ್ಥಳಗಳೂ ದೊರೆತು ಉಳಿದ ಪಕ್ಷಗಳಿಗೆ ಲಭ್ಯ ಸ್ಥಾನ

(೭ ನೇ ಪುಟ ನೋಡಿ)

ಶ್ರೀ ಮುದಲಿಯೂರರ

ಎರಡು ವರ್ಷ ಆಡಳಿತೆಯ "ಬ್ಯಾಲೆನ್ಸ್ ಶೀಟ್"

ಆಡಿಟರ್:- "ಶಂಭು"

ಅಂದಿನ ಸ್ಥಿತಿ

೧೯೪೭ನೇ ಮಾರ್ಚ್ ತಿಂಗಳ ೨೦ನೇ ತಾರೀಕಿನಲ್ಲಿ ಇಂದಿನ ಚೀಫ್ ಕಮಿಷನರಾಗಿರುವ ಶ್ರೀ ಸಿ. ಟಿ. ಮೊದಲಿಯೂರವರು ಜವಾಬ್ದಾರಿಯನ್ನು ವಹಿಸಿಕೊಂಡರು. ಈ ಎರಡು ವರ್ಷಗಳ ವರೆಗೆ ಕೊಡಗಿನ ಆಡಳಿತವನ್ನು ನಡೆಸಿದ ಇವರ ಕಾರ್ಯ ಕಲಾಪಗಳನ್ನು ತುಲನಾತ್ಮಕ ದೃಷ್ಟಿಯಿಂದ ಪರಿಶೀಲಿಸುವದೇ ಈ ಲೇಖನದ ಉದ್ದೇಶ. ಇವರು ಇನ್ನು ಕೆಲವೇ ದಿನಗಳಲ್ಲಿ ನಿವೃತ್ತರಾಗುವ ಕಾರಣ ನಿಷ್ಪಕ್ಷ ದೃಷ್ಟಿಯಿಂದ ಇವರು ಕೊಡಗಿಗೆ ಮಾಡಿದ ಉಪಕಾರ ಹಾಗೂ ಅಪಕಾರಗಳನ್ನು ನೋಡುವದು ಅವಶ್ಯ.

ನಿವೃತ್ತ ಅಧಿಕಾರಿಯೂದ ಇವರು ಕೊಡಗಿಗೆ ಬಂದು ಜವಾಬ್ದಾರಿ ವಹಿಸುವ ಮೊದಲು ದೇಶದ ಆಡಳಿತ ಕ್ಷೇತ್ರದಲ್ಲಾಗಲೀ, ರಾಜಕೀಯ ರಂಗದಲ್ಲಾಗಲೀ ಹೆಚ್ಚು ಗಡಿಬಿಡಿ ಇರಲಿಲ್ಲ. ಸರಕಾರದ ದೃಷ್ಟಿಯು ಯಾವದೇ ಪ್ರಗತಿಶೀಲ ಯೋಜನೆಯಲ್ಲಿರದೆ ದಿನನಿತ್ಯದ ಆಡಳಿತವನ್ನು ಸರಾಗವಾಗಿ ನಡೆಸುವುದರಲ್ಲಿಯೇ ಇತ್ತು. ಆದ್ದರಿಂದ ಯಾವುದೇ ಅಶಾಂತಿ ಇಲ್ಲದೆ ಆಡಳಿತ ನಡೆದಿತ್ತು. ಕೊಡಗಿನ ಪುಶ್ರ ಸೊಬ್ಬನೇ ಆಡಳಿತ ಜವಾಬ್ದಾರಿಯನ್ನು ಹೊತ್ತಿದ್ದ ಕಾರಣ ಠೀಕೆಗಳೂ ಕಡಿಮೆ ಇದ್ದವು!

ಆಂದರೆ ದೇಶದ ಮುಂದೆ ಸಮಸ್ಯೆಗಳಿರಲಿಲ್ಲವೆಂದಲ್ಲ. ಕಾಲೇಜಿನ ಪ್ರಶ್ನೆ ದೇಶದ ಮುಂದಿದ್ದು ಅದಕ್ಕಾಗಿ ಚಳವಳಿ ನಡೆದಿತ್ತು. ಪಾನನಿರೋಧವನ್ನು ಜಾರಿಗೆ ತರಬೇಕೆಂಬ ಕೂಗು ಸ್ಪಷ್ಟವಾಗಿತ್ತು. ದೇಶದ ರಾಜಕೀಯ ಪಕ್ಷವು ಇಬ್ಭಾಗವಾಗಿ ಇಂದಿನಂತೇ ಅಂದೂ ರಾಜಕೀಯ ಹೊಲಸಿನ ಪಕ್ಷಿ ಗರಿಗೆದರಿ ನರ್ತನಕ್ಕಾಗಿ ಕಂಭಿಸಿತ್ತು. ಆದರೆ ಇವಾವುದಕ್ಕೂ ಹೆಚ್ಚಿನ ಗಮನವಿಡದೆ ಸರಕಾರವು ತಣ್ಣೀರ ಅಭ್ಯಂಜನ ಮಾಡಿದವರಂತೆ ಶಾಂತವಾಗಿ ಒಂದು ರೀತಿಯ ಅನಾಸಕ್ತಿಯಿಂದಿದ್ದ ಪ್ರಯುಕ್ತ ದೇಶದ ವಾತಾವರಣದಲ್ಲಿ ಅತೃಪ್ತಿ ಇದ್ದರೂ ಉದ್ವೇಗವಿರಲಿಲ್ಲ.

ಉತ್ಸಾಹದ ಉದ್ಗಾರ

ಇವರು ಚೀಫ್ ಕಮಿಷನರ ಜವಾಬ್ದಾರಿ ವಹಿಸಿದ ಕೆಲವೇ ದಿನಗಳಲ್ಲಿ ಮಡಿಕೇರಿ ಹೈಸ್ಕೂಲಿನಲ್ಲಿ ನಡೆದ ಕಿಡ್‌ಕ್ರಾಸ್ ಶಿಶುಪ್ರದರ್ಶನದಲ್ಲಿ ಅಧ್ಯಕ್ಷ ಪೀಠದಿಂದ ತನ್ನ ಗುರಿಯನ್ನು ಈ ಮಾತುಗಳಿಂದ ಮುಂದಿಟ್ಟರು. "ನಾನು ನಿವೃತ್ತ ಉದ್ಯೋಗಿ. ಇಲ್ಲಿ ಬಂದು ದುಡಿಯುವ ಅಗತ್ಯವಿರಲಿಲ್ಲ. ಆದರೆ ಕೊಡಗಿನ ಪ್ರಶ್ನೆಗಳು ನನಗೆ ತಿಳಿದಿವೆ. ಕೊಡಗಿಗೊಂದು ಕಾಲೇಜನ್ನು ಸ್ಥಾಪಿಸಿ, ಪಾನನಿರೋಧವನ್ನು ಜಾರಿಗೆ ತಂದು, ದಳಿತ ವರ್ಗದ ಉದ್ಧಾರಕ್ಕಾಗಿ ಶ್ರಮಿಸಿ ನನ್ನ ಆಡಳಿತವು ಕೊಡಗಿನಲ್ಲಿ ಚಿರಸ್ಮರಣೀಯವಾಗುವಂತೆ ಮಾಡುವೆನು. ನನಗೆ ಯಾರ ಭಯವೂ ಇಲ್ಲ. ನಾನು ಹೆದರುವುದು ಕೇವಲ ಭಗವಂತನಿಗಾಗಿ. ಇಲ್ಲಿಯ ನನ್ನ ಸೇವೆಯನ್ನು ನನ್ನ ಇಷ್ಟದೈವ ಸುಬ್ರಹ್ಮಣ್ಯನ ಸೇವೆಯೆಂದೇ ನಾನು ಮಾಡುವೆನು. ಸಕಲರ ಸಹಕಾರ ಬೇಕು". ಕೊಡಗಿನ ಹಿತಕ್ಕಾಗಿ ದುಡಿಯುವ ಹಂಬಲ ಇವರಲ್ಲಿ ತುಂಬಾ ಇತ್ತು.

ಇಲ್ಲಿಯ ಅಧಿಕಾರ ವಹಿಸುವ ಮೊದಲು ಇವರು ಡೆಲ್ಲಿಯಾತ್ರೆ ಮಾಡಿ ಬಂದಿದ್ದರು. ಬ್ರಿಟಿಷ್ ಆಡಳಿತದಲ್ಲಿ ಅವರಿಗೊಪ್ಪುವಂತೆ ಸೇವೆ ಸಲ್ಲಿಸಿ "ದಿವಾನ್ ಬಹದ್ದೂರ್" ಪಡೆದಿದ್ದರೂ ಸ್ವತಂತ್ರ ಭಾರತದಲ್ಲಿ ಕೊಡಗಿನ ಚೀಫ್ ಕಮಿಷನರಾಗಿ ಡೆಲ್ಲಿಯಲ್ಲಿ ಸರ್ದಾರರ ಉಪದೇಶವಾದ ನಂತರ ಇವರಲ್ಲಿ ಹೊಸ ಹುರುಪು ಉದಯವಾಗಿರಬೇಕು. ಹೇಗೂ ತುಂಬಾ ಉತ್ಸಾಹದಿಂದ, ತನ್ನ ಹಿಂದಿನ ಗುಲಾಮ ಭಾರತದ ಜವಾಬ್ದಾರಿಯೆಂದು ಇದನ್ನು ತಿಳಿಯದೆ ಸ್ವತಂತ್ರ ಭಾರತದ ರಚನಾತ್ಮಕ ಪ್ರವೃತ್ತಿಯೆಂದು ತಿಳಿದು ಇಲ್ಲಿಗೆ ಬಂದು ಕಾರ್ಯೋನ್ಮುಖರಾದರು.

ಪ್ರಯತ್ನಗಳು

(೧) ಪ್ರಥಮವಾಗಿ ಅವರು ಕೈಕೊಂಡುದು ಕಾಲೇಜಿನ ಪ್ರಶ್ನೆ. ದೇಶದಲ್ಲಿ ಈ ಬಗ್ಗೆ ಎರಡು ಅಭಿಪ್ರಾಯವಿತ್ತು. ಕೊಡಗಿನ ಕಾಲೇಜು ಜನತೆಯ ಅರ್ಥಾತ್ ಸರಕಾರಿ ಕಾಲೇಜಾಗಬೇಕೆಂದು ಒಂದು ಪಕ್ಷವೂ, ವಿಶಿನರಿಗಳಿಗೆ ಬಿಟ್ಟುಕೊಡಬೇಕೆಂದು ಮತ್ತೊಂದು ಪಕ್ಷವೂ ತೀವ್ರ ಚಳವಳಿ ನಡೆಸಿದ್ದವು. ಈ ಚಳವಳಿದ ಕಾರಣ ಫಿಲೋವಿನಾ ವಿಶನಿನವರು ಇಲ್ಲಿ ಕಾಲೇಜು ಸ್ಥಾಪಿಸಲು ನಿರಾಕರಿಸಿದರು. ಸರಕಾರದ ಹೆಗಲಿಗೇ ಈ ಜವಾಬ್ದಾರಿ ಬಿತ್ತು. ಈ ಜವಾಬ್ದಾರಿಯನ್ನು ಆಡಳಿತದ ಜವಾಬ್ದಾರಿ ಹೊತ್ತ ಇವರು ಯಶಸ್ವಿಯಾಗಿ ನಿರ್ವಹಿಸಿ ತಮ್ಮ ಪ್ರಥಮ ಇಚ್ಛೆಯೂದ ಕಾಲೇಜಿನ ಯೋಜನೆಯನ್ನು ಸಾರ್ಥಕಗೊಳಿಸಿದರು.

(೨) ಎರಡನೆಯದಾದ ಕೊಡಗಿನಲ್ಲಿ ಪಾನನಿರೋಧವನ್ನು ಜಾರಿಗೆ ತರುವ ಏರ್ಪಾಡನ್ನೂ ಇವರು ಆಸ್ಥೆಯಿಂದ ಕೈಕೊಂಡರು. ಆದರೆ ಕೊಡಗಿನ ಸರಕಾರಿದ ಬೊಕ್ಕಸಕ್ಕೆ ಸುಮಾರು ಹತ್ತು ಲಕ್ಷ ರೂಪಾಯಿ ಇದರಿಂದ ಪೆಟ್ಟು ಬೀಳುವ ಪ್ರಸಂಗವಿದ್ದ ಕಾರಣ ಸಾವಧಾನದಿಂದ ವರ್ತಿಸಬೇಕಾಯಿತು. ಆದ್ದರಿಂದ ನಿಯಂತ್ರಣವನ್ನು ಜಾರಿಗೆ ತಂದು ಕೂಪನ್ ಪದ್ಧತಿಯನ್ನು ಜಾರಿ ಮಾಡಲಾಯಿತು. ಇದನ್ನು ಸ್ವಾರ್ಥಿಗಳು ಕೆಲವರು ದುರುಪಯೋಗ ಮಾಡಿಕೊಂಡರು. ಕಪ್ಪು ಸಂತೆ, ಲಾಭಬಡಕತನಕ್ಕೆ ಇದು ಎಡೆಯಾಯಿತು ಇದನ್ನು ತಡೆಯಲು ಏರ್ಪಟ್ಟವರ ಕೆಲಸವೂ ಸಂಶಯಾತೀತವಾಗಿಲ್ಲ! ಇದರಿಂದಾಗಿ ಠೀಕೆಯು ಸರಕಾರದ ಮೇಲೆ ಬಿತ್ತು. ಇದಕ್ಕಾಗಿ ನಿಯಂತ್ರಣದ ಯೋಜನೆಯನ್ನು ಜಾರಿಯಲ್ಲಿ ತಂದ ಚೀಫ್ ಕಮಿಷನರೂ ಠೀಕೆಗೆ ಗುರಿಯಾಗಿದ್ದಾರೆ. ಎಲ್ಲಾ ಅರ್ಥವರ್ಥದ ಕೆಲಸಕ್ಕೆ ಸಿಕ್ಕುವ ಉಡುಗೊರೆಯೇ ಇದಲ್ಲವೇ?

(೩) ಮೂರನೆಯದಾದ ದಳಿತವರ್ಗದವರ ಉದ್ಧಾರದ ಬಗ್ಗೆಯೂ ಇವರು ಮನಸ್ಸಿಟ್ಟು ಪ್ರಯತ್ನಿಸಿದರು. ಇವರು ಹೋದ ಕಡೆಯಲ್ಲೆಲ್ಲಾ ದಳಿತವರ್ಗದವರ ಗುಂಪು ನೆರೆದು ತಮ್ಮ ಸಮಸ್ಯೆಗಳನ್ನು ಮುಂದಿಟ್ಟರು. ಚೀಫ್ ಕಮಿಷನರ ಆಫೀಸಿನಲ್ಲಿ ಈ ಅರ್ಜಿಗಳ ಮಳೆಯೇ ಸುರಿಯಿತು. ಸಾರ್ವಜನಿಕ ಸ್ಥಳಗಳ ಹಕ್ಕು ಮತ್ತು ಮಂದಿರ ಪ್ರವೇಶದ ಏರ್ಪಾಡುಗಳನ್ನು ಮಾಡಲಾಯಿತು. ಹರಿಜನರಿಗೆ ಭೂಮಿ ಕೊಟ್ಟು ಊರ್ಜಿತಗೊಳಿಸುವ ಪ್ರಯತ್ನ ನಡೆಯಿತು. ಈ ಪ್ರಗತಿಶೀಲ ಮನೋಭಾವ ಹಲವರಿಗೆ ವಿರೋಧವಾಗಿ ತೋರಿತು. ಇಷ್ಟರಲ್ಲಿ ಚೀಫ್ ಕಮಿಷನರ ಚೇತನ ಉಡುಗುತ್ತಿರುವಂತೆ ತೋರಿತು! ಡೆಲ್ಲಿಯಲ್ಲಿ ತಿರುಗಿಸಿ ಬಿಟ್ಟ ಚಕ್ರವು ಇಲ್ಲಿ ಬಂದು ಕ್ಷಣ ಕಾಲ ಸುತ್ತಿ ಮತ್ತೆ ನಿಲ್ಲುವ ಸೂಚನೆಯೇ ಇದು ಎಂದು ಕೆಲವರು ಕೇಳತೊಡಗಿದರು. ಏಕೆಂದರೆ ಹರಿಜನರಿಗೆ ಸಹಾಯದ ಭರವಸೆಯು ಸಾವಿರ ಸಂಖ್ಯೆಯಲ್ಲಿ ಮೂಡಲ್ಪಟ್ಟರೂ ಕೈಗೂಡಿದ್ದು ಕೆಲವು ಮಾತ್ರ. ಆದ್ದರಿಂದ ಹರಿಜನ ವೃಂದದಲ್ಲಿ ತೃಪ್ತಿಯ ಬದಲು ಅತೃಪ್ತಿಯೇ ಹೆಚ್ಚಾಗಿದೆ.

ಪಕ್ಷರಾಜಕೀಯದ ಏಟು.

ಮೊದಲು ಅಷ್ಟು ಉತ್ಸಾಹ ಭರಿತವಾಗಿದ್ದ ಇವರ ಚೇತನವು ತಣಿಯುತ್ತಾ ಬರಲು ಕಾರಣವೇನೆಂದು ಶೋಧಿಸಬೇಕಿಲ್ಲ. ಆವೆರೇ ಹಲವು ಕಡೆಗಳಲ್ಲಿ ಆದನ್ನು ಸ್ಪಷ್ಟಪಡಿಸಿದ್ದಾರೆ. 'ಕೊಡಗಿನ ರಾಜಕೀಯವು ಇಬ್ಭಾಗವಾಗಿ ಎರಡು ಪಕ್ಷಗಳಾಗಿರುವದರಿಂದ ಸರಕಾರವು ಪ್ರಗತಿ ಪಥದಲ್ಲಿ ಮುನ್ನಡೆಯುವದು ಕಷ್ಟವಾಗಿದೆ. ಯಾವುದೇ ಯೋಜನೆ ಇಲ್ಲವೇ ಕಾರ್ಯಕ್ರಮವನ್ನು ಕೈಕೊಂಡರೂ ಅದಕ್ಕೆ ಕೊಡಗಿನ ಭವಿಷ್ಯದ ಬಣ್ಣ ಬಳಿದು ಸರಕಾರವನ್ನೂ ಪಕ್ಷರಾಜಕೀಯದ ಕೆಸರಿಗೆಳೆಯುವ ಪ್ರಯತ್ನವಾಗುತ್ತದೆ. ಆದ್ದರಿಂದ ಈ ಎರಡು ರಾಜಕೀಯ ಪಕ್ಷಗಳು ಒಂದಾಗದ ವಿನಹ ಸರಕಾರಕ್ಕೆ ಹೆಚ್ಚಿನ ದೇನನ್ನೂ ಸಾಧಿಸಲಾಗದು' ಎಂದಿದ್ದಾರೆ.

ಇವರು ಕೈಕೊಂಡ ಕೆಲಸಗಳಿಗೂ ಪಕ್ಷರಾಜಕೀಯದ ರಂಗು ಹಾಕಲ್ಪಟ್ಟಿತು. ಇವರನ್ನು ತೆಗೆದುಹಾಕಬೇಕೆಂದು ಅರ್ಜಿಗಳು ಕೇಂದ್ರಕ್ಕೆ ಮೇಲಿಂದ ಮೇಲೆ ಹೋದವು. ಶ್ರೀ. ಐಯ್ಯಂಗಾರ್‌ರವರು ಮಡಿಕೇರಿಗೆ ಬಂದಿದ್ದಾಗ ಅವರಿಗೆ ಈ ವಿಚಾರವನ್ನು ಒತ್ತಿ ಮನದಟ್ಟು ಪಡಿಸಲಾಯಿತು. ಡೆಲ್ಲಿಯಲ್ಲಿ ಐಯ್ಯಂಗಾರರು ಚಕ್ರ ತಿರುಗಿಸಲು ಪ್ರಯತ್ನಿಸಿದರು! ಬೇರೊಬ್ಬರನ್ನು ಕೊಡಗಿಗೆ ಚೀಫ್ ಕಮಿಷನರಾಗಿ ಏರ್ಪಾಡು ಮಾಡಲಾಗಿದ್ದು ಅವರು ಶೀಘ್ರ ಬರುವರೆಂಬ ವಾರ್ತೆ ಬಂದಿತ್ತು. ಮೊದಲಿಯೂರರು ಮಾಡಿದ ಪ್ರಯತ್ನಗಳ ಕಥೆಯೂ ಸರ್ದಾರರ ಮುಂದೆ ಹೋಗಿ ಸರ್ದಾರರಿಗೆ ಮುದಲಿಯೂರರ ಕೆಲಸದಲ್ಲಿ ಅತೃಪ್ತಿ ತೋರಲಿಲ್ಲ. "He has done precious little" ಎಂದರು! ಮುದಲಿಯೂರರನ್ನು ನೂರು ತಿಂಗಳು ಹಿಂದೆ ಉರುಳಿಸಲು ಯತ್ನಿಸಿದ ಪ್ರಯತ್ನವು ಫಲಕಾರಿಯಾಗಲಿಲ್ಲ; ಆದರೂ ಪ್ರಯತ್ನ ನಡೆದೇ ಇತ್ತು!

ಕೊಡಗಿನ ವಿಚಿತ್ರ ಸ್ಥಿತಿ.

ಕೊಡಗು ಚಿಕ್ಕ ಆಡಳಿತ ಘಟಕ. ಇದರಲ್ಲಿ ಎಲ್ಲರಿಂದಲೂ ಹೊಗಳಿಸಿಕೊಳ್ಳುವಂತೆ, ಅದರಲ್ಲೂ ರಾಜಕೀಯ ಪಕ್ಷಗಳಲ್ಲಿ ಸ್ಪರ್ಧೆ ನಡೆದಿರುವಾಗ್ಗೆ ಸೈ ಎನ್ನಿಸಿಕೊಳ್ಳುವಂತೆ ಆಡಳಿತ ನಿರ್ವಹಿಸುವದು ಯಾರಿಗೂ ಸಾಧ್ಯವಿಲ್ಲ. ಚಿಕ್ಕ ಘಟಕವಾದ ಕಾರಣ ಇಂದು ಇಲ್ಲಿ ನಡೆದ ವಿಚಾರ ನಾಳೆ ಅಲ್ಲಿ ತಿಳಿದಿರುತ್ತದೆ. ಸರಕಾರವು ಮಾಡುವ ಕೆಲಸಕ್ಕೂ ಬಣ್ಣ ಕಟ್ಟಲು ಸುಲಭವಾಗುತ್ತದೆ. ಕಳೆದ ವಾರದ ಪತ್ರಿಕೆಯಲ್ಲಿ 'ಕೊಡಗಿಗೆ ಜವಾಬ್ದಾರಿ ಸರಕಾರ ಹೊರತೆರೆ ಜನಾನುರಾಗಿ ಭದ್ರ ಸರಕಾರವನ್ನು ಸ್ಥಾಪಿಸುವದು ಕಠಿಣವೆಂದು' 'ವಿರಾಟ್' ಎಂಬವರು ಬರೆದಿದ್ದರು. ಈ ಮಾತಿನಲ್ಲಿ ಸತ್ಯತೆ ಇದೆ. ಕೊಡಗು ಪ್ರತ್ಯೇಕ ಆಡಳಿತಕ್ಕೆ ಯೋಗ್ಯವಿರಲಿ ಯೂ ಇಲ್ಲದಿರಲಿ ಆ ಬಗ್ಗೆ ಪರಿಶೀಲಿಸಿ ಅಭಿಪ್ರಾಯ ಕೊಡುವ ಹಕ್ಕು ಅದರೆ ರಾಜಕೀಯವೇತ್ತರಿಗಿರಲಿ. ಆದರೆ ಕೊಡಗಿನಲ್ಲಿ ಇಂದು ಸಕಲರ ಅನುರಾಗವನ್ನು ಪಡೆದು ಆಡಳಿತ ನಡೆಸಲು ಯೋಗ್ಯತೆ ಇರುವ ಮುಂದಾಳುಗಳು ಇಲ್ಲವೆಂದೂ, ಹಾಗಿಲ್ಲದಿರಲು ಕೊಡಗು ಚಿಕ್ಕ ಘಟಕವಾಗಿರುವದೇ ಕಾರಣವೆಂದೂ ಹೇಳಬೇಕಾಗಿದೆ. ಮನುಷ್ಯನ ವ್ಯಕ್ತಿಗತ ಜೀವನವನ್ನೂ ರಾಜಕೀಯ ರಂಗದಲ್ಲಿ ಉಪಯೋಗಿಸಿ, ಹೇಗಾದರೂ ಮಾಡಿ ಕೆಳಗಿಳಿಸಿ ತಾವು ಬಲಗೊಳ್ಳಬೇಕೆಂಬ ಪಾತಾವರಣದಲ್ಲಿ ಚಿಕ್ಕ ತಪ್ಪೇ ಮಹಾಪಾತಕವೆನಿಸುವದು; ಅನಾಸಕ್ತಿಯೇ ಅಸಮರ್ಥತೆಯೆಂತೆ ದು ಕರೆಯಲ್ಪಡುವದು.

ಉದ್ಯೋಗಸ್ಥರ ನೈತಿಕ ಮಟ್ಟ.

ಇವರು ಕೊಡಗಿಗೆ ಬರುವ ಮೊದಲು ಕೊಡಗಿನಲ್ಲಿ ಲಂಚ, ಅನ್ಯಾಯ, ಲಾಭಬಡಕತನ ಹೆಚ್ಚಿತ್ತೆಂದೂ ಇವರು ಬಂದನಂತರ ಅದು ಸುಧಾರಿಸಿತ್ತೆಂದೂ ಹೇಳುವ 'ವಿರಾಟ್'ರ ಅಭಿಪ್ರಾಯಕ್ಕೆ ನಾನೊಪ್ಪಲಾರೆ. ಅಂದಿದ್ದ ಲಾಭ ಬಡಕತನ, ಲಂಚಗುಳಿತನ ಇಂದೂ ಇಲ್ಲವೆಂದು ಹೇಳಲು ಸಾಧ್ಯವಿಲ್ಲ. ವ್ಯಾಪಾರೀ ವೃಂದದಲ್ಲಿಯ ಪರಿಸ್ಥಿತಿ ಅಂದೂ ಇಂದೂ ಒಂದೇ ಯಾಗಿದೆ. ಆದರೆ ಸರಕಾರಿ ಉದ್ಯೋಗಿಗಳಲ್ಲಿ ಒಂದು ರೀತಿಯ ನೈತಿಕ ಪತನವೇ ಇವರ ಕಾಲದಲ್ಲಿ ಆಗಿದೆಯೆಂದು 'ವಿರಾಟರಿಗೆ ವಿರೋಧವಾಗಿ ಹೇಳಬೇಕಾಗಿದೆ. ಇವರು ನಿವೃತ್ತರಾಗುವರೆಂದು ತಿಳಿದ ನಂತರ ನನಗೆ ಭೇಟಿಯಾದ ಪ್ರತಿಯೊಬ್ಬ ಸರಕಾರಿ ನೌಕರನನ್ನು 'ಇವರ ವಿಚಾರ ಕೇಳಿರುವೆನ್ನು. ಆಶ್ಚರ್ಯದ ಸಂಗತಿಯೆಂದರೆ ಇವರ ಪ್ರಸಂಶೆಮಾಡುವವರನ್ನು ಈ ಮ

(ಜನೇ ಪುಠಕ್ಕೆ ಸಾಗಿದೆ)

ಕೊ ಡ ಗು

ತಾ. ೩-೩-೧೯೫೦ನೇ ಶುಕ್ರವಾರ

ಕಾಂಗ್ರೆಸ್ ಪಂಚಾಯಿತರ ಚುನಾವಣೆ.

ಸುಮಾರು ಹತ್ತು ವರ್ಷಗಳಿಂದ ಕೊಡಗಿನಲ್ಲಿ ಕಾಂಗ್ರೆಸಿನ ವಿವಿಧ ಕಮಿಟಿಗಳ ಚುನಾವಣೆಗಳಾಗಲಿಲ್ಲ. ೧೯೪೯ ರಿಂದ ೧೯೪೯ರ ವರೆಗೆ ಕಾಂಗ್ರೆಸ್ ಸಂಸ್ಥೆಯ ಮೇಲೆ ಆಗಿನ ಸರಕಾರದ ನಿರ್ಬಂಧವಿದ್ದ ಕಾರಣ ಚುನಾವಣೆಗೆ ಅವಕಾಶವಿರಲಿಲ್ಲ. ಆನಂತರ ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಸಮಿತಿಯು ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿಯು ಕಾರ್ಯಕಲಾಪಗಳಲ್ಲಿ ಕೈಹಾಕಿ ಕೊಡಗಿನ ಚುನಾಯಿತ ಜಿಲ್ಲಾ ಸಮಿತಿಯನ್ನು ರದ್ದುಮಾಡಿ ತಾತ್ಕಾಲಿಕ ಜಿಲ್ಲಾ ಸಮಿತಿಯೊಂದನ್ನು ಒಂದು ವರ್ಷದ ಅವಧಿಗಾಗಿ ನೇಮಿಸಿತ್ತು. ಈ ಎಡ್‌ಹಾಕ್ ಸಮಿತಿಯು ಅವಧಿಯು ಮುಗಿದು ವರ್ಷಗಳಾದರೂ, ಹೊಸ ಚುನಾವಣೆಗಳಾಗಬೇಕೆಂದು ಜಿಲ್ಲೆಯು ಕೂಗಿಕೊಂಡರೂ ಈ ವರೆಗೆ ಚುನಾವಣೆ ಮೊಗದೆ ಈ ಎಡ್‌ಹಾಕ್ ಸಮಿತಿಯೇ ನಡೆದು ಬರುತ್ತಿದೆ. ಈಗ ಹೊಸ ಮೆಂಬರುಗಳನ್ನು ಸೇರಿಸುವ ಶೀಲವು ಪೂರ್ತಿಯಾಗಿ ಪಂಚಾಯತರ ಚುನಾವಣೆ ನಡೆಯುತ್ತಿದೆ. ಈ ಚುನಾವಣೆಯು ನ್ಯಾಯ ನಿಯಮಗಳನ್ನು ಬಿಟ್ಟು ವಿಚಿತ್ರ ರೀತಿಯಿಂದ ಬಹುಮತದ ಕಾಂಗ್ರೆಸ್ ಸದಸ್ಯರಿಗೆ ವಿಶ್ವಾಸವಿಲ್ಲದ ಎಡ್‌ಹಾಕ್ ಸಮಿತಿಯಿಂದ ನಡೆಸಲ್ಪಡುತ್ತಿದೆ. ಕಾಂಗ್ರೆಸ್ ಸದಸ್ಯರನ್ನು ಸೇರಿಸುವ ರಶೀತಿ ಪುಸ್ತಕಗಳನ್ನು ಈ ಎಡ್‌ಹಾಕ್ ಸಮಿತಿಯವರು ತಮ್ಮ ಹಿಂಬಾಲಕರಿಗೆ ಮಾತ್ರ ಕೊಟ್ಟು ಇತರ ಹಳೇ ಕೆಲಸಗಾರರಿಗೆ ಕೊಡದ್ದರಿಂದ ಅಖಿಲ ಭಾರತ ಕಾಂಗ್ರೆಸಿನ ಅಧ್ಯಕ್ಷರ ಅನುಮತಿ ಮೇರೆ ಬೇರೆ ರಶೀತಿ ಪುಸ್ತಕಗಳನ್ನು ಅಚ್ಚುಹಾಕಿಸಿ ಸದಸ್ಯರನ್ನು ಸೇರಿಸಬೇಕಾಯಿತು. ನಂತರ ಅಧಿಕೃತ ಮತ್ತು ಸಕ್ರೀಯ ಸದಸ್ಯರನ್ನು ಸೇರಿಸುವ ಫಾರಂಗಳನ್ನೂ ಕೊಡದೆ ಸೇರಿಸಲು, ನಿಶ್ಚಿತವಾದ ತಾರೀಕಿನ ಅವಧಿಯನ್ನೂ ಪ್ರಕಟಿಸದೆ ಹಲವರಿಗೆ ಸದಸ್ಯರಾಗಲು ಅನುಕೂಲವಾಗಲಿಲ್ಲ. ಸದಸ್ಯರಾದವರಲ್ಲಿ ಕೆಲಪರು ಆದೇರ ನಿಯಮಕ್ಕೆ ಸರಿಯಾಗಿ ಇಲ್ಲದೆ, ಪರದೇಶೀ ವಸ್ತ್ರಧಾರಿಗಳೂ, ನಿಶಾ ಭಕ್ತರೂ ಆಗಿದ್ದಾರೆ. ಇದೂ ಅಲ್ಲದೆ ಪಂಚಾಯಿತರ ಚುನಾವಣೆ ಬಗ್ಗೆ ಇನ್ನೊಂದೆಡೆ ಪ್ರಕಟಿಸಿರುವ ಕೆ. ಪಿ. ಸಿ. ಸಿ ವರ್ಕ್ಯೂಲರಿನಂತೆ ಅವಕ್ಕಿರುವ ನಿಯಮಗಳನ್ನು ಅನುಸರಿಸದೆ ಕೊಡಗಿನಲ್ಲಿ ಚುನಾವಣೆಗಳು ನಡೆಯುತ್ತಿವೆ ಒಂದು ಪಂಚಾಯಿತ ಕೇಂದ್ರದಲ್ಲಿ ೫೦೦೦ ಜನಸಂಖ್ಯೆ ಮತ್ತು ೨೫೦ ಕಾಂಗ್ರೆಸ್ ಸದಸ್ಯರಿರಬೇಕೆಂದು ನಿಯಮವಿದ್ದರೂ ಇಲ್ಲಿಯ ಕೆಲವು ಕೇಂದ್ರಗಳಲ್ಲಿ ಹತ್ತು ಹದಿನೈದು ಸಾವಿರಕ್ಕಿಂತಾ ಹೆಚ್ಚಿನ ಜನಸಂಖ್ಯೆ ಇದೆ. ಪ್ರಾಥಮಿಕ ಅಧಿಕೃತ ಮತ್ತು ಸಕ್ರೀಯ ಸದಸ್ಯರ ಪಟ್ಟಿಗಳನ್ನು ಯಾವ ಕಾಂಗ್ರೆಸ್ ಆಫೀಸಿನಲ್ಲೂ ಪ್ರಕಟಿಸಿರುವದಿಲ್ಲ. ಚುನಾವಣಾ ಕಾರ್ಯಕ್ರಮವನ್ನು ಬಹಿರಂಗಪಡಿಸಿರುವದಿಲ್ಲ. ಉಪೇಕ್ಷಿಸುವಾರರಿಂದ ನೇಮಕ ಪತ್ರಗಳನ್ನು ತೆಗೆದಿರುವದಿಲ್ಲ. ಪಂಚಾಯಿತ ಕೇಂದ್ರಗಳನ್ನು ತಾಲೋಕು ಯಾ ಪಟ್ಟಣ ಕಮಿಟಿಗಳನ್ನು ಕೇಳಿ ನಿಶ್ಚಯಿಸಿರುವದಿಲ್ಲ. ಯಾವುದನ್ನೂ ಮಾಡದೆ ವಿಮಿಟಿಗಿನ ನೋಟೀಸುಗಳನ್ನು ಒಂದೆರಡು ದಿನಗಳ ಮುಂಚಿತವಾಗಿ ಬಹು ಕಡಿಮೆ ಜನರಿಗೆ ಅಂದರೆ ಸುಮಾರು ಶೇಕಡಾ ಇಪ್ಪತ್ತು ಜನರಿಗೆ ಮಾತ್ರ ಹಂಚಿ ಚುನಾವಣೆ ನಡೆಸಲಾಗುತ್ತಿದೆ. ಕಳೆದ ತಿಂಗಳು ೨೧ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಮಾಟೆಂಗು ನಡೆದು ಈ ಚುನಾವಣೆಗಳನ್ನು ಮುಂದರಿಸಿ ಮಾರ್ಚ್ ಅಂತ್ಯದೊಳಗೆ ಮುಗಿಸಬೇಕೆಂದೂ ಇವುಗಳ ನಿಶ್ಚಿತ ತಾರೀಕುಗಳನ್ನು ಹಿಂದಳಿಂದ ಪ್ರಾಂತೀಕ ಕಾಂಗ್ರೆಸ್ ಸಮಿತಿಗಳಿಗೆ ತಿಳಿಸಲಾಗುವದೆಂದೂ ಪ್ರಕಟವಾಗಿದ್ದರೂ ಆಧಕ್ಕೆ ಮೊದಲೇ ಕೊಡಗಿನ ಎಡ್ ಹಾಕ್ ಸಮಿತಿಯವರು ಚುನಾವಣೆಗಳನ್ನು ನಡೆಸುತ್ತಿರುವರು. ಅಕ್ರಮವಾಗಿ ನಡೆದಿರುವ ಮತ್ತು ನಡೆಯುತ್ತಿರುವ ಈ ಚುನಾವಣೆಗಳ ರದ್ದಾಗುವದರಲ್ಲಿ ಸಂಶಯವಿಲ್ಲ. ಈ ರೀತಿಯ ಅಕ್ರಮ ಕಾರ್ಯಕಲಾಪಗಳಿಂದ ಕಾಂಗ್ರೆಸಿನ ಪ್ರತಿಷ್ಠೆಯು ಕುಂದಿ ಜನತೆಗೆ ಕಾಂಗ್ರೆಸ್ ಸಂಸ್ಥೆಯ ಮೇಲಿರುವ ವಿಶ್ವಾಸವೂ ಪ್ರೀತಿಯೂ ಕಡಿಮೆಯಾಗುವದರಲ್ಲಿ ಸಂಶಯವಿಲ್ಲ. ಸಂಬಂಧಪಟ್ಟ ಮೇಲಧಿಕಾರಿಗಳು ಇಂಥಾ ನ್ಯೂನತೆಗಳನ್ನು ಸರಿಪಡಿಸಿ ಕಾಂಗ್ರೆಸ್ ಮಹಾ ಸಂಸ್ಥೆಯು ಪೊಡವಿ ನಂತೆ ಜನಾನುರಾಗಿ ಸಂಸ್ಥೆಯಾಗುವಂತೆ ಮಾಡುವರಾಗಿ ಆಶಿಸುತ್ತೇವೆ.

ಮ ತ್ತ ಮಾ ನ .

ಕೋರಂ ದೊರೆಯದೆ ಮುಂದರಿಸಲ್ಪಟ್ಟಿದ್ದ ದಕ್ಷಿಣ ಕೊಡಗು ಸಹಕಾರ ಸಂಘದ ವಾರ್ಷಿಕ ಸಭೆಯು ತಾ. ೧೧-೩-೫೦ ರಲ್ಲಿ ಶ್ರೀ ಪಟ್ಟಡ ಉತ್ತಪ್ಪನವರ ಅಧ್ಯಕ್ಷತೆಯಲ್ಲಿ ವಿರಾಜಪೇಟೆ ಮುನ್ಸಿಪಲ್ ಹಾಲ್‌ನಲ್ಲಿ ನಡೆಯುವದು.

ಕೊಡಗಿನ ಆಹಾರ ಸಲಹಾ ಸಮಿತಿಯ ಸದಸ್ಯರಾಗಿ ತಾ. ೧-೨-೫೦ ರಿಂದ ಒಂದು ವರ್ಷದವರೆಗೆ ಶಾಸನ ಸಭೆಯ ಪರ ಶ್ರೀ ಎಸ್. ಸೋಮಯ್ಯನವರನ್ನೂ, ಕೆ. ಪಿ. ಅಸ್ಪಯ್ಯನವರನ್ನೂ, ಕೊಡಗು ಪ್ಲಾಂಟರುಗಳ ಸಂಘದ ಪರ ಮಿ. ಜೆ. ಎಚ್. ಸ್ಕಾಟ್ ಇವರನ್ನು, ಇಂಡಿಯನ್ ಪ್ಲಾಂಟರುಗಳ ಸಂಘದ ಪರ ಶ್ರೀ ಡಿ. ಎಚ್. ದಾಸಪ್ಪನವರನ್ನೂ, ಜಮೀನ್ದಾರರ ಪರ ಶ್ರೀ ಎ. ಸಿ. ಶಿವಪ್ಪಯ್ಯ ಮತ್ತು ಕೆ. ಪಿ. ಕರುಂಬಯ್ಯನವರುಗಳನ್ನು, ಉಪಯೋಗಿಸುವವರ ಪರ ಜನಾಬ್ ಅಬ್ದುಲ್ ರಹಮಾನ್‌ಖಾನ್ ಮತ್ತು ಶ್ರೀ ಕೆ. ಸಿ. ಕರುಂಬಯ್ಯನವರನ್ನೂ ಆರಿಸಲಾಗಿದೆ.

ಇಂಡಿಯನ್ ಆರ್ಮಿಪಫ್ಲೈ ಕೋರಿನಲ್ಲಿ ರವಾಬದ್ದಾರ್ ಶ್ರೀ ನಡಿಕೇರಿಯಂಡ ಯನ್. ಭೀಮಯ್ಯನವರಿಗೆ ಕಾಶ್ಮೀರದ ರಣರಂಗದಲ್ಲಿ ತೋರಿಸಿದ ಪರಾಕ್ರಮಕ್ಕಾಗಿ ಇಂಡಿಯನ್ ಸರಕಾರದವರು ವೀರಚಕ್ರ ಪ್ರಶಸ್ತಿಯನ್ನು ಕೊಟ್ಟಿರುವರು.

ಹೆಡ್ ಸರ್ವೇಯರು ಕೆಲಸದಿಂದ ನಿವೃತ್ತರಾಗಿದ್ದ ಶ್ರೀ ಮೂತಂಡ ಕುಟ್ಟಪ್ಪನವರನ್ನು ಸೆಟಿಲ್‌ಮೆಂಟ್ ಇಲಾಖೆಯಲ್ಲಿ ಪುನಃ ಹೆಡ್ ಸರ್ವೇಯರಾಗಿ ನೇಮಕ ಮಾಡಿಗುವರು.

ಬೇಗನೆ ಚೀಫ್ ಕವಿಷನರ್ ಹುದ್ದೆಯಿಂದ ನಿವೃತ್ತರಾಗಲಿರುವ ಶ್ರೀ ಸಿ. ಟಿ. ಮೊದಲಿಯರ್ ಮತ್ತವರ ಪತ್ನಿಯವರನ್ನು ಬೀಳ್ಕೊಡಲು ಫೆಬ್ರವರಿ ತಾ. ೧೮ ರಲ್ಲಿ ಪಾರಣೆಯಲ್ಲೂ, ೨೪ರಲ್ಲಿ ಮೂರ್ನಾಡಿನಲ್ಲೂ, ೨೫ರಲ್ಲೂ ಫ್ರೇಜರ್‌ಪೇಟೆಯಲ್ಲೂ, ೨೭ರಲ್ಲಿ ಕಾಗಡಿಂದ ಮತ್ತು ನಾಪೋಕ್ಲಿನಲ್ಲೂ ೨೮ರಲ್ಲಿ ಅಮ್ಮತ್ತಿ ಮತ್ತು ವೀರಾಜಪೇಟೆಯಲ್ಲೂ, ೨೯ರಲ್ಲೂ ಹುದಿಕೇರಿ ಮತ್ತು ಪೊನ್ನಂಪೇಟೆಯಲ್ಲೂ ಈ ತಾರೀಕು ೧ರಲ್ಲಿ ಮಡಿಕೇರಿಯಲ್ಲೂ ಮತ್ತು ೨ರಲ್ಲಿ ಶನಿವಾರಸಂತೆಯಲ್ಲಿ ಮತ್ತು ಸೋಮವಾರಪೇಟೆಯಲ್ಲಿಯೂ ಸತ್ಕಾರ ಕೂಟಗಳು ನಡೆಸಲ್ಪಟ್ಟವು.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ ಹುಬ್ಬಳ್ಳಿ

ಪ್ರಾಥಮಿಕ ಕಾಂಗ್ರೆಸ ಪಂಚಾಯಿತಿಗಳ ರಚನೆ ಹಾಗೂ ಅವುಗಳ ಚುನಾವಣೆ ನಿಯಮಗಳು.

(೧) ಸುಮಾರು ೫೦೦೦ ಜನ ಸಂಖ್ಯೆಯುಳ್ಳ ಕ್ಷೇತ್ರಕ್ಕೆ ಒಂದರಂತೆ ಪ್ರಾಥಮಿಕ ಕಾಂಗ್ರೆಸ ಪಂಚಾಯಿತಿಗಳನ್ನು ರಚಿಸಲಾಗಿದೆ ಇವುಗಳ ರಚನೆಯು ಕಾಲಕ್ಕೆ ಶಹರುಗಳನ್ನು ಹಾಗು ಪಟ್ಟಣಗಳನ್ನು ಮುನಿಸಿಪಲ್ ವಾರ್ಡವಾರ ಅಲ್ಲವೆ ಒಣಿಗಳವಾರ ವಿಭಾಗಿಸಲಾಗಿದೆ. ಇದರಂತೆಯೇ ದೊಡ್ಡ ದೊಡ್ಡ ಗ್ರಾಮಗಳನ್ನಾದರೂ ವಿಭಾಗಿಸಿದೆ. ಮತ್ತು ೫೦೦೦ಕ್ಕಿಂತ ಕಡಿಮೆ ಜನ ವಸತಿಯುಳ್ಳ ಗ್ರಾಮಗಳನ್ನು ಗುಂಪುಗೂಡಿ ಸುಮಾರು ೫೦೦೦ ಜನಸಂಖ್ಯೆಯುಳ್ಳ ಪಂಚಾಯಿತಿಗಳನ್ನು ರಚಿಸಿದೆ.

(೨) ೧ನೇ ನಿಯಮದನ್ವಯ ರಚಿಸಿದ ಕಾಂಗ್ರೆಸ ಪಂಚಾಯಿತಿಯಲ್ಲಿ ಕನಿಷ್ಟ ೨೫೦ ಪ್ರಾಥಮಿಕ ಕಾಂಗ್ರೆಸ ಸದಸ್ಯರು ಆಗಿದ್ದರೆ ಮಾತ್ರ ಪಂಚಾಯತಿಯು ಅಸ್ತಿತ್ವದಲ್ಲಿ ಬರುವದು; ಅಂದಿಗೆ ಪಂಚಾಯತಿಯ ಸದಸ್ಯರನ್ನು ಅಥವಾ ಪಂಚರನ್ನು ಚುನಾಯಿಸಲಾಗುವದು. ಪ್ರಾಥಮಿಕ ಕಾಂಗ್ರೆಸ ಸಂಖ್ಯೆಯ ಪ್ರಮಾಣಕ್ಕನುಸರಿಸಿ ಪಂಚರ ಸ್ಥಳಗಳು ದೊರೆಯುವವು. ಅವುಗಳ ವಿವರವು ಕೆಳಗಿನಂತೆ ಇರುವವು:

ಪಂಚಾಯತಿಯಲ್ಲಿ ಪ್ರಾಥಮಿಕ ಸದಸ್ಯರ ಸಂಖ್ಯೆ		ಚುನಾಯಿಸಲಾಗುವ ಪಂಚರ ಸ್ಥಳಗಳು
೨೫೦	ಇದ್ದಲ್ಲಿ	೩
೫೦೦	,,	೪
೭೫೦	,,	೫
೧೦೦೦	,,	೬
೧೨೫೦	,,	೭
೧೫೦೦	,,	೮
೧೭೫೦	,,	೯
೨೫೦೦	,,	೧೦

ಯಾವದೇ ಕಾರಣದಿಂದ ಒಂದು ಪಂಚಾಯಿತಿಗೆ ೧೦ ಕ್ಕಿಂತ ಹೆಚ್ಚು ಪಂಚರ ಸ್ಥಳಗಳು ದೊರೆಯಲಾರವು.

೭೫೦ ಕ್ಕಿಂತ ಹೆಚ್ಚು ಪ್ರಾಥಮಿಕ ಸದಸ್ಯರುಳ್ಳ ಪಂಚಾಯಿತಿಯಲ್ಲಿ ೭೫೦ಕ್ಕೆ ೧ ರಂತೆ ಪಂಚರ ಸ್ಥಳ ಹೆಚ್ಚಿಸುವಾಗ್ಗೆ ಉಳಿದ ಹಾಗೂ ಅದಕ್ಕಿಂತ ಹೆಚ್ಚು ಸದಸ್ಯರು ಇದ್ದರೆ ಒಂದು ಸ್ಥಳ ದೊರೆಯುವದು. ಇದರಂತೆಯೇ ಹೆಚ್ಚಿಗೆ ದೊರೆಯುವ ಪಂಚರ ಸ್ಥಳಗಳನ್ನು ತಿಳಿಬೇಕು. ಉದಾ :-೭೫೦ ಕ್ಕೆ ೩ ಸ್ಥಳಗಳನ್ನು ಕೊಟ್ಟ ಹೆಚ್ಚಿನ ಒಂದು ಸ್ಥಳ ದೊರೆಯಬೇಕಾದರೆ ೧೫೨. ಸದಸ್ಯರಿರಬೇಕು. ೧೫೨ ರಿಂದ ೧೦೦೦ ದವರೆಗೆ ಸದಸ್ಯರಿದ್ದರೂ ಒಂದೇ ಸ್ಥಳ ದೊರೆಯುವದು.

(೩) ಯಾವದೊಂದರಿಂದು ಪ್ರಾಥಮಿಕ ಕಾಂಗ್ರೆಸು ಪಂಚಾಯತಿಯಲ್ಲಿ ೨೫೦ ಕ್ಕಿಂತ ಕಡಿಮೆ ಪ್ರಾಥಮಿಕ ಸದಸ್ಯರು ಆಗಿದ್ದಲ್ಲಿ ಆ ಪಂಚಾಯತಿಯನ್ನು ಅದೇ ತಾಲೋಕು ಅಥವಾ ತಹಸೀಲಿನ ಸಮೀಪದ ಹಾಗು ಹೊಂದಿದ ಹೊಂಚಾಯತಿಯಲ್ಲಿ ಸಮಾವೇಶ ಮಾಡಬೇಕು.

(೪) ಪ್ರತಿಯೊಂದು ಪಂಚಾಯತಿಯಲ್ಲಿಯ ಪ್ರಾಥಮಿಕ ಸದಸ್ಯರ ವಿವರವು ಜಿಲ್ಲಾ ಹಾಗು ತಾಲೋಕು ಕಾಂಗ್ರೆಸು ಸಮಿತಿಗಳಲ್ಲಿ ಮತ್ತು ಪ್ರಾಥಮಿಕ ಕಾಂಗ್ರೆಸ ಪಂಚಾಯತಿಯಲ್ಲಿ ಇರಬೇಕು. ಈ ಯಾವಿಯಲ್ಲಿ ನಮೂದಾದ ಸದಸ್ಯರೇ ಪಂಚಾಯತಿಯ ಚುನಾವಣೆಯು ಮತದಾರರಾಗುವರು.

(೫) ಪ್ರತಿಯೊಂದು ಪಂಚಾಯತಿಯಲ್ಲಿ ಸೇರ್ಪಡೆಯಾಗಿರುವ ಗ್ರಾಮಗಳ, ಮತದಾರರ ಹಾಗು ಜನಸಂಖ್ಯೆಗಳ ವಿವರವನ್ನು ಜಿಲ್ಲಾ ಕಾಂಗ್ರೆಸು ಸಮಿತಿಯವರು ಪ್ರಾಂತೀಯ ಕಾಂಗ್ರೆಸು ಸಮಿತಿಗೆ ಪಂಚಾಯತಿಗಳ ಚುನಾವಣೆ ನಡೆಯಿಸುವ ಪೂರ್ವದಲ್ಲಿಯೇ ತಿಳಿಸಿ ಚುನಾವಣೆ ನಡೆಯಿಸಲು ಮುಂಜಾರಿಯನ್ನು ಪಡೆದುಕೊಳ್ಳತಕ್ಕದ್ದು. ಇಂಥ ಮುಂಜಾರಿಯನ್ನು ಪಡೆದುಕೊಳ್ಳದೇ ಚುನಾವಣೆಯನ್ನು ನಡೆಯಿಸಲಾಗದು.

(೬) ಪ್ರಾಂತೀಯ ಸಮಿತಿಯು ಕ್ಷೇತ್ರದಲ್ಲಿ ನಿರ್ವಾಸಲಾಗಿರುವ ಜಿಲ್ಲಾ ಕಾಂಗ್ರೆಸು ಸಮಿತಿಗೊಬ್ಬನಂತೆ ಜಿಲ್ಲಾ ರಿಟರ್ನಿಂಗ್ ಆಫೀಸರನನ್ನು ಪ್ರಾಂತೀಯ ಕಾಂಗ್ರೆಸು ಸಮಿತಿಯು ಕೌನ್ಸಿಲ್ ಇಲ್ಲವೇ ಅವರಿಂದ ಅಧಿಕಾರ ಪಡೆದುಕೊಂಡವರು ನೇಮಿಸುವರು. ಜಿಲ್ಲಾ ರಿಟರ್ನಿಂಗ್ ಆಫೀಸರನು ಆ ಜಿಲ್ಲೆಯಲ್ಲಿಯ ತಾಲೋಕು, ತಹಸೀಲ, ಮಹಾಲ ಅಥವಾ ಸರ್ಕಲಿಗೊಬ್ಬನಂತೆ ತಾಲೋಕು ಚುನಾವಣೆ ಅಧಿಕಾರಿಯನ್ನು ನೇಮಿಸುವನು. ಇವನು ತನ್ನ ಹತ್ತು ನಶ್ಚಿಯ ಪಂಚಾಯತಿಗಳ ಚುನಾವಣೆಗಳನ್ನು ಸ್ವತಃ ಇಲ್ಲವೇ ಬೇರೆ ಚುನಾವಣೆ ಅಧಿಕಾರಿಗಳನ್ನು ನೇಮಿಸಿ ನಡೆಯಿಸುವನು.

ಜಿಲ್ಲಾ ರಿಟರ್ನಿಂಗ್ ಆಫೀಸರ ಹಾಗು ತಾಲೋಕು ಚುನಾವಣೆ ಅಧಿಕಾರಿಗಳ ಮತ್ತು ಪಂಚಾಯತಿ ಚುನಾವಣೆ ಅಧಿಕಾರಿಗಳ ನೇಮಣೂಕಿಗಳು ಲೇಖಿಯಲ್ಲಿಯೇ ಇರತಕ್ಕದ್ದು. ಈ ಅಧಿಕಾರಿಗಳಿಗೆ ಜಿಲ್ಲಾ ಹಾಗು ಅಧೀನ ಕಾಂಗ್ರೆಸು ಸಮಿತಿಗಳು ಸಹಾಯ ಹಾಗು ಸಹಕಾರ ಪಡಿಸಬೇಕು.

(೭) ಪ್ರಾಥಮಿಕ ಕಾಂಗ್ರೆಸು ಪಂಚಾಯತಿಯ ಚುನಾವಣೆಗೆ ಉಮೇದುವಾರನಾಗುವವನು ಪ್ರಥಮತಃ ಅದೇ ಪಂಚಾಯತಿಯ ಹದ್ದಿನಲ್ಲಿ ವಾಸಿಸುವ ಅಧಿಕೃತ ಸದಸ್ಯನಿರಬೇಕು. ಮತ್ತು ಮತದಾರರಾಗುವದಿನದ ಹಿಂದಿನ ಎರಡು ವರ್ಷಗಳಲ್ಲಿ ಕಳ್ಳಭಟ್ಟಿ, ಅನೀತಿ, ಲಂಚಗಳಿತನ ಮಾಡಿ ಇಲ್ಲವೆ ಪಾಪ ನಿರೋಧ ಕಾಯಿದೆ ಮುರಿದು ಕೋರ್ಟಿನಿಂದ ಶಿಕ್ಷೆ ಹೊಂದಿರಬಾರದು.

(೮) ಯಾವದೇ ಪಂಚಾಯತಿಯ ಹದ್ದಿನಲ್ಲಿ ತುಂಬತಕ್ಕ ಪಂಚರ ಸ್ಥಳಗಳಷ್ಟು ಅಧಿಕೃತ-ಸದಸ್ಯರು ಇಲ್ಲದೇ ಇದ್ದಲ್ಲಿ ಆ ಪಂಚಾಯತಿಗೆ ಹೊಂದಿದ ಅದೇ ತಾಲೋಕಿನ ಅಥವಾ ಶಹರದ ಬೇರೆ ಪಂಚಾಯಿತಿಯ ಹದ್ದಿನಲ್ಲಿಯ ಅಧಿಕೃತ ಸದಸ್ಯರ ಹೆಡಿನೆ ಬಿದ್ದ ಉಮೇದ್ವಾರರ ಮಟ್ಟಿಗೆ ಆರ್ಜಿಗಳನ್ನು ಕೊಡಬಹುದು.

(ಇನ್ನೂ ಪುಕ್ಕಟ್ಟೆ ಸಾಗಿದೆ)

(ಸಿನೇ ಪುಠದಿಂದ ಸಾಗಿದ್ದು)

ರೆಗೆ ನಾನು ಭೇಟಿಯಾಗಿಲ್ಲ. ಹಿಂದೆ ಮದ್ರಾಸ್ ಸೆಕ್ರೆಟರಿಯೇಟಿನಲ್ಲಿ ಕೆಲಸ ಮಾಡಿ ಒಳಗುಟ್ಟುಗೊತ್ತಿರುವ ಇವರು ಅಫೀಸಿನ ಸ್ಟೇಶನರಿ ಲೆಕ್ಕ ಮೊದಲಾದುವನ್ನು ಗಣಿಸಿ ನೌಕರರಿಗೆ ಒಂದು ರೀತಿಯ ಭೀತಿಯನ್ನು ಉಂಟುಮಾಡಿದರೆಂಬುದು ಸಹಜ. ಆದರೆ ಆ ಮಾರ್ಗ ರಚನಾತ್ಮಕವಾಗಿರದೆ ವಿನಾಶಾತ್ಮಕವಾದುದು! ನೌಕರರು ಇಂದುಕೊಡುತ್ತಿರುವ ಗೌರವ ಕೇವಲ ಹೆದರಿಕೆಯ ವಿಧೇಯತೆಯಿಂದ. ಅಂದರೆ ಅವರಲ್ಲಿರುವ ಅಧಿಕಾರದ ಭಯದಿಂದ. ಇದು ಯೋಗ್ಯ ಮಾರ್ಗವಲ್ಲ. ನೌಕರರು ಪ್ರೀತಿಯ ವಿಧೇಯತೆಯನ್ನು ಸಲ್ಲಿಸುವ ವಾತಾವರಣವಿದ್ದರೆ ಮಾತ್ರ ಅಧಿಕಾರಿ ಮತ್ತು ಕೆಳನೌಕರರಲ್ಲಿ ಐಕ್ಯತೆ, ಅನ್ಯೋನ್ಯತೆ ಇರಬೆಯೆಳ್ಳಬಹುದು. ಈ ದೃಷ್ಟಿಯಿಂದ ಸರಕಾರಿ ನೌಕರರಲ್ಲಿ ಬಹುತೇಕ ಜನರು ನಿಯಮದ ಕಾರಣಕ್ಕಾಗಿ ತಲೆಬಾಗಿಸುತ್ತಿದ್ದರೇ ವಿನಹ ಪ್ರೀತಿಯ ವ್ಯಕ್ತಿಗೌರವದ ಕಾರಣಕ್ಕಾಗಿ ಅಲ್ಲ ಆದ್ದರಿಂದ ಸಿಬ್ಬಂದಿಗಳ ಬಗೆಗೆ ಇವರ ಪ್ರವೃತ್ತಿಯು ಅಧಿಕಾರದ ಮಾರ್ಗದಲ್ಲಿ ಸಾಗಿತೇ ವಿನಹ ಸೌಹಾರ್ದತೆಯ ಮಾರ್ಗದಲ್ಲಿ ಸಾಗಲಿಲ್ಲ. ಆದ್ದರಿಂದ ಎಮರು ಕಂಡಾಗ ನೌಕರರ ತಲೆಬಾಗಿದರೂ ಮರೆಯಾದಾಗ ಕಿಗ್ಗನುಡಿಗಳನ್ನಾಡುವ ಪ್ರಸಂಗ ಬಂದಿತ.!

ಧರ್ಮ ಮತ್ತು ಆಡಳಿತ

ಇವರು ಮಹಾ ದೈವಿಕವಾದಿಗಳು ಸಂಬ್ರಹ್ಮಣ್ಯನ ಭಕ್ತರು. ಆವರ್ಶ ಪುರುಷರು. ಇವರು ಕೊಡಗನ್ನು ಸಂಬ್ರಹ್ಮಣ್ಯನ ನಾಡೆಂಡರು, ಎಂದು ಹೇಳುವವರಿದ್ದಾರೆ "Religion is the opium of the ignorant" ಎಂಬಂತೆ ಆಡಳಿತ ದೃಷ್ಟಿಯಿಂದ ಸಾಧಕ ಬಾಧಕಗಳನ್ನು ತಿಳಿಯುವವರ ಬಾಲಲಾ ಈ ಧರ್ಮದ, ವೇದಾಂತದ ಪರಿಕಲ್ಪನೆಯನ್ನು ಮುಚ್ಚಿ ಸರ್ವವೂ ಆರಾಧ್ಯವೆನ್ನುವ ನೀತಿ ಖಂಡನೀಯ. ಧರ್ಮ, ದೇವರು ಇವು ವ್ಯಕ್ತಿಯ ಆಂತರಿಕ ಜೀವನಕ್ಕೆ ಸೀಮಿತವು. ಅವರು ಹಳ್ಳಿಗೇ ಹೋಗಲಿ, ಕಾಪೇರಿಗೇ ತೆರಳಲಿ ಯಾ ಊರನ್ನೇ ಪೂಜಿಸಲಿ ದೇಶದ ಆಡಳಿತಕ್ಕೂ ಅದಕ್ಕೂ ಸಂಬಂಧವಿಲ್ಲ. ಯಾವ ಧರ್ಮಾತ್ಮನೆ ಇರಲಿ ಇಂದಿನ ಯುಗದಲ್ಲಿ ಅಧಿಕಾರ ಹೊತ್ತ ಚೇತನನ್ನು ಬಿಳಿಡುವ ಆಳತೆಗೋಲು ಬಹು ಜನರಿಗೆ ಅತನು ಸಲ್ಲಿಸಿದ ಸೇವೆ ವಿನಹ ಬೇರಿಲ್ಲ. ಆದ್ದರಿಂದ ಧಾರ್ಮಿಕ ಪ್ರವೃತ್ತಿ ಇರುವ ಈ ಚೀಫ್ ಕಮಿಷನರು ನ್ಯಾಯವನ್ನೇ ಮಾಡಿರಬೇಕೆಂಬುದೂ, ಮೂರು ವರ್ಷಗಳ ಕಾಲ ಸುಬ್ರಹ್ಮಣ್ಯನನ್ನು ನೆನೆಸುವವರು ಅಹಿತ ಆಡಳಿತ ನಡೆಸಲಾರರೆಂದು ನಂಬುವದೂ ಒಪ್ಪುವ ಮಾತಲ್ಲ ಏಕೆಂದರೆ ಧಾರ್ಮಿಕ ನಾವ ನ್ಯಕ್ಕೆಯು, ಮತ್ತು ಅಧಿಕಾರ ಹೊತ್ತ ಚೀಫ್ ಕಮಿಷನರ ಕ್ಷೇತ್ರಗಳೇ ಬೇರೆ.

ನ್ಯೂನತೆಗಳು.

ಜಗತ್ತಿನಲ್ಲಿ ನ್ಯೂನತೆಗಳಿಲ್ಲದ ವ್ಯಕ್ತಿ ಇಲ್ಲ ಹಾಗಿರುವಾಗ ಇವರೂ ನ್ಯೂನತೆಗಳಿಂದ ಮುಕ್ತರಾಗಿರುವದು ಸಾಧ್ಯವಿಲ್ಲ ಇವರಲ್ಲಿ ನಾನು ಕಂಡ ಪ್ರಥಮ ನ್ಯೂನತೆಯೆಂದರೆ ಇಲ್ಲವಷ್ಟರವ ಸೇವೆಗಳನ್ನು ಕೊಡವದು. ಅವರ ಹತ್ತಾರು ಭಾಷಣಗಳನ್ನು ನಾನು ಕೇಳಿದ್ದೇನೆ. ಅದು ಹಾರಂಗಿ ಯೋಜನೆಯೇ ಆಗಲಿ, ಹರಿಜನ ಉದ್ಧಾರವೇ ಆಗಲಿ ಮೊದಲು ಆವನ್ನು ಮಾಡಿಕುವೆನು, ಈ ಸೌಕರ್ಯ ಒದಗಿಸುವೆನು ಎಂಬ ಆಶಾಗೋಪುರವನ್ನು ಕಟ್ಟಿ ನಂತರ ಸಾಧಿಸುವುದು ಅಲ್ಪವಾದರೆ ಜನರು ಮಾಡಿದ ಅಲ್ಪಸ್ವಲ್ಪವನ್ನು ಮರೆಯುವದು ಸ್ವಾಭಾವಿಕ. "ಕರೋ ಪಹಲೆ; ಕಹೋ ಪೀಛೆ" ಎಂಬ ಮಾರ್ಗವನ್ನು ಇವರು ಅನುಸರಿಸಿದ್ದರೆ ಇಂದಿಗಿಂತಾ ಹೆಚ್ಚು ಜನಾನುರಾಗಿಯೂ ಗುತ್ತಿದ್ದರು. ಬೇರೆಯವರು ಮೆಚ್ಚಬೇಕೆಂಬ ಆಶೆ ಎಲ್ಲರಿಗೂ ಇದ್ದಂತೆ ಇವರಿಗೂ ಇದ್ದುದು ತಪ್ಪಲ್ಲ. ಆದರೆ ಇತರರು ಎಲ್ಲಾ ವ್ಯಕ್ತಿಗಳಂತಲ್ಲದೆ ಚೀಫ್ ಕಮಿಷನರ ಅಧಿಕಾರ ಹೊತ್ತಿದ್ದುದರಿಂದ ಈ ನಿರ್ಬಲತೆ ನ್ಯೂನತೆ ಎನಿಸುತ್ತದೆ. ಇವರು ಆಗಾಗ ಪ್ರಕಟಿಸುತ್ತಿದ್ದ ಸ್ವೆಸ್ ಪ್ರಕಟಣೆ, ಅಲ್ಲಲ್ಲಿ ಮಾಡುತ್ತಿದ್ದ ಭಾಷಣಗಳು, ಇವರು ಸಹಿ ಸಿಕೊಂಡ ಸಾರ್ವಜನಿಕ - ವೈರವಣಿಗೆ, ಕಂಕುಮ ಪೂಜೆ, ಸ್ತುತಿ ಕೀರ್ತನೆಗಳ ಹಿನ್ನೆಲೆಯಲ್ಲಿ ಆತ್ಮಸ್ತುತಿಯ ಅಪೇಕ್ಷೆಯು ನೆಳಲು ಇಲ್ಲವೆಂದು ಹೇಳಲಾಗುವದಿಲ್ಲ. ಈ ಗೌರವಗಳು ತನ್ನ ಅಧಿಕಾರದ ಕರ್ಚಿಗೆ ಮಾತ್ರವಲ್ಲದೆ ತನ್ನ ಸೇವೆಯನ್ನು ಗುರ್ತಿಸಿ ಅಲ್ಲನೆಂದು ತಿಳಿದಿದ್ದರೆ ಹಿತವಾಗುತಿತ್ತು. ಇಂಥಾ ಆಡಂಬರಗಳು ನಡೆಯುವಂತೆ ವರ್ತಿಸಿದ್ದರೆ ಇನ್ನೂ ಜನರ ಹೃದಯವನ್ನು ಗೆಲ್ಲಬಹುದಿತ್ತು.

ಲಾಭ ನಷ್ಟ.

ವ್ಯಕ್ತಿಯು ದುರ್ಗುಣ, ಸದ್ಗುಣಗಳನ್ನು ತೂಗಿ ನೋಡಿ ಯಾವುದು ಹೆಚ್ಚಿದೆಯೋ ಹಾಗೆ ವ್ಯಕ್ತಿಯನ್ನು ವರ್ಗೀಕರಿಸುವಂತೆ ಚೀಫ್ ಕಮಿಷನರ ಅಧಿಕಾರದ ಎರಡು ವರ್ಷಗಳ ಕಾರ್ಯಕಲಾಪಗಳ ತುಲನೆಯಿಂದ ಹೇಳುವದಾದರೆ ಆಹಿತಕ್ಕಿಂತಾ ಸ್ವಲ್ಪವಾದರೂ ದೇಶಕ್ಕೆ ಹೆಚ್ಚಿನ ಹಿತವಾಗಿದೆ. ಯುದ್ಧೋತ್ತರ ಪುನರ್ನಿರ್ಮಾಣ ಈ ಸಮಯದಲ್ಲಿ ಹೆಚ್ಚು ದಕ್ಷರೂ, ಯುವಕರೂ, ಹೆಚ್ಚಿನ ಪ್ರಗತಿಶೀಲ ಮನೋಭಾವನೆಯರೂ, ಹೊಗಳಿಕೆ ತೆಗಳಿಕೆಗೆ ಅಂಜದೆ ಜನಹಿತದ ಆಳತೆಗೋಲನ್ನು ಹಿಡಿದು ಮುಂದೆ ಸಾಗುವವರೂ ನಮಗೆ ಬೇಕಿತ್ತು. ಆದರೆ ಕೇಂದ್ರ ಸರಕಾರವು ಕೊಡಗು ಶಾಂತಿಯ ದೇಶವೆಂದೂ ನಿವೃತ್ತರಾದವರೇ ಸಾಕೆಂದು ಕಳುಹಿಸಿತು! ಆದರೆ ಮುಂದಲಿಯೂರವರು ನಿವೃತ್ತ ಅಧಿಕಾರಿಯಾದರೂ ತನ್ನ ಎರಡು ವರ್ಷಗಳ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ. ಕೊಡಗು ಅವರ ಆಳ್ವಿಕೆಯಲ್ಲಿ ನಷ್ಟಕ್ಕಿಂತಾ ಹೆಚ್ಚು ಲಾಭವನ್ನು ಪಡೆದಿದೆ. ಆದರೆ ಕಡೇ ಹೆಜ್ಜೆಯಲ್ಲಿ ಅಪಶ್ರುತಿಯಂತೆ ಅವರು ಸಮರಿ ಕೊಡಾಯಿದೆ ಮಸೂದೆಯೊಂದನ್ನು ತಂದು ಜೇನುಗೂಡಿಗೆ ಕೈ ಹಾಕಿ ಕೆಜಕಿದಂತೆ ಮಾಡಿ ಅಶಾಂತಿಯನ್ನೆಬ್ಬಿಸಿದರು. ಇವಕ್ಕೆ ಕಾರಣರು ಇವರೋ ಯಾ ಕೇಂದ್ರವೋ ಎಂದು ಸ್ಪಷ್ಟವಾಗಿ ತಿಳಿದಿಲ್ಲವಾದರೂ ಇಂದಿನ ಪ್ರಜಾಯಳಗದ ಅಧಿಕಾರಿಯಾದ ಇವರು ಸಮರಿ ಕೊಡಾಯಿದೆ ಪದ್ಧತಿ ಬೇಡವೆಂದು ಸೂಚಿಸಿ, ವ್ಯವಸಾಯ ಆದಾಯ ತೆರಿಗೆ ಜಾರಿಯಲ್ಲಿ ಬರುವಂತೆ ಮಾಡಬಹುದಿತ್ತು. ಮನುಷ್ಯ ಬುದ್ಧಿಯಲ್ಲವೆ? ಒಮ್ಮೊಮ್ಮೆ ತಪ್ಪುತ್ತದೆ. ಯಂತ್ರದಂತೆ ಸರಿಯಾಗಿ ಸದಾಕಾಲ ನಡೆಯಲು ಯಾರಿಗೂ ಸಾಧ್ಯವಾಗದು. ಆದು ಸಾಧ್ಯವಾಗಬೇಕಾದರೆ ಮೂಡಿದ್ದನ್ನೇ ಮೂಡಬೇಕಾಗುವದು. ಆದರೆ ಪ್ರಗತಿಶೀಲ ಪಥವಲ್ಲಿ ನಡೆಯುವದಾದರೆ ಇದೆಲ್ಲಿ ಸಾಧ್ಯ? ಹೇಗೂ ಮುಂದಲಿಯೂರವರು ಕೊಡಗಿಗೆ ಹಿತವನ್ನು ಮಾಡಿದ್ದಾರೆ. ಜನತೆಯನ್ನು ಜಾಗೃತಿಗೊಳಿಸಿದ್ದಾರೆ. ಅವರು ನಿವೃತ್ತರಾಗಿ ಶಾಂತಿಯನ್ನು ಪಡೆಯಲು ತುಂಬಾ ಅರ್ಹರು.

ಶಾಲಾ ಉತ್ಸವ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ವಾರ್ಷಿಕೋತ್ಸವದ ಸಂಬಂಧ ಆಟೋಟಗಳೂ, ಬಹುಮಾನ ವಿತರಣಾ ಸಮಾರಂಭವೂ ತಾ. ೨೮ ರಲ್ಲಿ ಶ್ರೀ. ಸಿ. ಎಂ. ರಾಮರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಶಾಲಾ ಮುಖ್ಯೋಪಧ್ಯಾಯರಾದ ಶ್ರೀ. ಗಣೇಶರಾಯರು ಶಾಲಾವರದಿಯನ್ನು ಮುಂದಿಟ್ಟು ಹೈಸ್ಕೂಲ್ ಆವರಣದಲ್ಲೇ ಕಾಲೇಜು ಸ್ಥಾಪಿಸುವ ಕಾರಣ ಹೈಸ್ಕೂಲಿಗಾದ ಕೊರತೆಯ ತೊಂದರೆ ಮತ್ತಿತರ ಅಡಚಣೆಗಳನ್ನು ವಿವರಿಸಿದರು. ದೇವೀ ಚರ್ಚ್‌ಕೂಟವರದಿಯನ್ನು ಕಾರ್ಯದರ್ಶಿ ಶ್ರೀ. ಐ. ಯಂ. ಕಾರ್ಯಪ್ಪನವರೂ, ನಿವಾಸಗೃಹವರದಿಯನ್ನು ಶ್ರೀ. ಐ. ಕೆ. ತಿಮ್ಮಯ್ಯನವರೂ ಓದಿದರು. ಶಾಲಾ ಪಾಠ ಪುಸ್ತಕಗಳಲ್ಲಿಯೂ, ಆಟೋಟಗಳಲ್ಲಿಯೂ ಬಹುಮಾನ ಪಡೆದವರಿಗೆ ಬಹುಮಾನ ವಿತರಣೆ ಮಾಡಲಾಯಿತು. ಆಧ್ಯಕ್ಷರು ಸದ್ಯದ ವಿದ್ಯಾಸಮಸ್ಯೆಯ ವಿಚಾರ ಮಾಡುತ್ತಾ ಏನೊಂದೂ ಪ್ರಗತಿಯಾಗಿಲ್ಲವೆಂದೂ, ತೋಟದಲ್ಲಿ ಗಿಡವನ್ನು ನೆಟ್ಟು ಬೇರಿಳಿದಿಸೆಯೇ ಎಂದು ಯಾವಾಗಲೂ ಕಿತ್ತು ನೋಡಿದ ಪ್ರಸಂಗವಾಗಿದೆಯೆಂದೂ, ಸ್ವಾತಂತ್ರ್ಯ ಬಂದ ಮೇಲೂ ವಿದ್ಯಾಯೋಜನೆಯಲ್ಲಿ ಕೆಲವು ಹೆಸರುಗಳ ವಿನಹ ಮೂಲತಃ ಏನೂ ವ್ಯತ್ಯಾಸವಾಗಿಲ್ಲವೆಂದೂ ಹೇಳಿದರು. ಇತ್ತೀಚೆಗೆ ಶಾಲೆಯಲ್ಲಿ ಶಿಸ್ತಿಲ್ಲವೆಂದು ಅಧ್ಯಾಪಕರನ್ನು ಬಯ್ಯುವದು ಸಾರ್ವಜನಿಕರ ಕೆಲಸವಾಗಿದೆಯೆಂದೂ ಶಿಸ್ತೆಂದರೆ ಜನಸಾಮಾನ್ಯರು ಸೈನಿಕ ಶಿಸ್ತೆಂದು ಭಾವಿಸುವದು ತಪ್ಪೆಂದೂ, ಶಾಲೆಯ ಶಿಸ್ತೇ ಭಿನ್ನವಾದುದೆಂದೂ ಹೇಳಿದರು. ಅಲ್ಲದೆ ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಜವಾಬ್ದಾರಿಯನ್ನು ಕೊರ್ದಿಸಿ ಸ್ವಾರಸ್ಯ ಭಾಷಣ ಮಾಡಿದರು. ವಂದನಾರ್ಪಣೆಯಿಂದ ಸಭೆ ಮುಕ್ತಾಯವಾಯಿತು.

ಶಂಕುಸ್ಥಾಪನೆ.

ಶನಿವಾರ ೨೬-೩-೫೦ನೇ ಗುರುವಾರ ಬೆಳಿಗೆ ಮಡಿಕೇರಿ ಮಹಿಳಾ ಸಹಕಾರ ಸಮಾಜದ ಶಂಕುಸ್ಥಾಪನಾ ಕಾರ್ಯವು ಕೊಡಗಿನ ಚೀಫ್ ಕಮಿಷನರ್ ಶ್ರೀ ಸಿ. ಟಿ. ಮೊದಲಿಯಾರರಿಂದ ನಡೆಯಿತು. ಸಮಾಜದ ಕಾರ್ಯದರ್ಶಿಯವರಾದ ಮಂಡೇಪಂಡ ವಿ.ಸೆಸ್ ಬೋಪಯ್ಯನವರು ಸರ್ವರಿಗೂ ಸ್ವಾಗತವನ್ನು ನೀಡಿ ಸಂಘದ ಕಾರ್ಯಕಲಾಪಗಳನ್ನು ವಿವರಿಸಿದರು. ಸಂಘವು ಶಿಶುವಿಹಾರ, ಹೊಲಿಗೆ ಕೆಲಸ, ಹಿಂದೀ, ವಿಜ್ಞಾನ ಮೊದಲಾದ ಕಾರ್ಯಗಳನ್ನು ನಡೆಸುತ್ತಿರುವದಾಗಿಯೂ ಕಟ್ಟಡಕ್ಕಾಗಿ ೭೦೦೦/- ರೂಪಾಯಿಗಳನ್ನು ಸಂಗ್ರಹಿಸಿರುವದಾಗಿಯೂ ಸುಮಾರು ೫೦೦೦/-ವರೆಗೆ ವಾಗ್ದಾನ ಮಾಡಿದ ಹಣವಿರುವದಾಗಿಯೂ ಹೇಳಿದರು. ಸರಕಾರವು ನಿವೇಶನವನ್ನು ವದಗಿಸಿದಲ್ಲದೆ ರೂ. ೫೦೦೦ ಧನ ಸಹಾಯ ಮಾಡಿದೆಯೆಂದೂ ಹೇಳಿದರು. ಕಟ್ಟಡಕ್ಕೆ ರೂ. ೧೫೦೦೦ ಖರ್ಚಾಗುವದೆಂದೂ ಇತರ ಸಾಹಿತ್ಯಗಳಿಗೆ ರೂ. ೨೦೦೦ ಬೇಕಾಗುವದೆಂದೂ ಹೇಳಲ್ಲವೆ* ಸರ್ವರೂ ಸಹಕರಿಸಿ ಪ್ರಯತ್ನವನ್ನು ಜಯಪ್ರದಗೊಳಿಸಬೇಕೆಂದು ಕೇಳಿಕೊಂಡರು. ಚೀಫ್ ಕಮಿಷನರು ತನ್ನ ಭಾಷಣದಲ್ಲಿ ಸಂಘದ ಕಾರ್ಯಕಲಾಪಗಳನ್ನು ಹೊಗಳಿರು. ಕಟ್ಟಡದ ಆವಶ್ಯಕತೆಯನ್ನು ಒಪ್ಪಿರು. ಮುತುವರ್ಜಿತೆಯಿಂದ ಕೆಲಸ ಮಾಡುತ್ತಿರುವ ಪ್ರೆಡೆಂಟರಾದ ಪಾಂಡಂಡ ವಿಸ್ ಚಂಗಪ್ಪನವರ ಮತ್ತು ಕಾರ್ಯನಿವಾಹಕರ ಮೇಲ್ವಿಚಾರಣೆಯಲ್ಲಿ ಸಂಘವು ತ್ಯುಪಯುಕ್ತ ಕೆಲಸ ಮಾಡುವದೆಂದು ಶಿಸಿದರು. ನಂತರ ಶಂಕುಸ್ಥಾಪನೆ ನಯಿತು. ಸಹಕಾರಿ ಸಂಘಗಳ ರಿಜಿಸ್ರಾರಾದ ಶ್ರೀ ಪಿ. ಎಂ. ಚಂಗಪ್ಪನವರು ಸಂಘದ ಧ್ಯೇಯವನ್ನು ವಿವರಿಸಿ ಸರ್ವರ ಸಹಕಾರ ಬೇಕೆಂದು ಕೇಳಿದರು. ಪಂದ್ಯಂಡ ವಿಸೆಸ್ ಬೆಳ್ಯಪ್ಪನವರು ಧನಾರ್ಪಣೆಯನ್ನು ಅರ್ಪಿಸಿದರು. ನೆರೆದವರಿಗೆ ಹೂವು ಮತ್ತು ತಾಂಬೂಲ ಹಂಚಲಾಯಿತು.

ಭಾವಚಿತ್ರ ಅನಾವರಣ.

ತಾ. ೨-೩-೫೦ರಲ್ಲಿ ಕೊಡಗು ಶಾಸನ ಸಭಾ ಮಂದಿರದಲ್ಲಿ ಕೊಡಗಿನ ಆ ಮೊದಲಿನ ಚೀಫ್ ಕಮಿಷನರೆನಿಸಿದ ದಿ. ಬ. ಕೇಟೋಳಿರ ಚಂಗಪ್ಪನವರ ಭಾವಚಿತ್ರವನ್ನು ಅನಾವರಣ ಮಾಡುವ ಸಮಾರಂಭವು ಕೊಡಗಿನ ಈಗಿನ ಚೀಫ್ ಕಮಿಷನರಾದ ದಿ. ಬ. ಸಿ. ಟಿ. ಮೊದಲಿಯಾರರಿಂದ ನಡೆಯಿತು. ಪ್ರಾರ್ಥನೆಯ ನಂತರ ರಾ. ಬ. ಕೆ. ಜಿ. ಬೆಳ್ಯಪ್ಪನವರು ಈ ಭಾವಚಿತ್ರವನ್ನು ದಿ. ಬ. ಚಂಗಪ್ಪನವರಿಗೆ ಅವರು ನಿವೃತ್ತರಾಗುವಾಗ ಕೊಟ್ಟ ಸತ್ಕಾರಕ್ಕಾಗಿ ಸಂಗ್ರಹಿಸಿದ ಹಣದ ಉಳುವರಿಯಿಂದ ನಿರ್ಮಿಸಿದ್ದಾಗಿದೆಯೆಂದರು. ನಂತರ ಶ್ರೀ ಚಂಗಪ್ಪನವರ ವ್ಯಕ್ತಿತ್ವ, ಕಾರ್ಯದಕ್ಷತೆ ಮೊದಲಾದುವನ್ನು ಹೊಗಳಿ ಶಾಶನಸಭಾ ಮಂದಿರದಲ್ಲಿ ಅವರ ಭಾವಚಿತ್ರವನ್ನಿಡುವ ಔಚಿತ್ಯತೆಯನ್ನು ವಿವರಿಸಿ ಶ್ರೀ ಮೊದಲಿಯಾರರು ಭಾವಚಿತ್ರವನ್ನು ಅನಾವರಣ ಮಾಡುವಂತೆ ಕೇಳಿಕೊಂಡರು. ಶ್ರೀ ಮೊದಲಿಯಾರರು ಶ್ರೀ ಚಂಗಪ್ಪನವರ ದೂರದರ್ಶಿತ್ವ, ಆಡಳಿತ ದಕ್ಷತೆ ಮೊದಲಾದುವನ್ನು ವಿವರಿಸಿ ರಾಜಕೀಯ ರಂಗಕ್ಕೆ ಕಾಲಿಡದೆ ದೂರದಲ್ಲಿ ಉಳಿದಿದ್ದರೂ ಅವರು ದೇಶಕ್ಕಾಗಿ ಮಾಡುತ್ತಿರುವ ಹಿತಚಿಂತನೆಯು ಸರ್ವರೂ ಅನುಕರಿಸಲು ಯೋಗ್ಯವಾದುದೆಂದರು. ನಂತರ ಅನಾವರಣವು ನಡೆಯಿತು. ರಾಷ್ಟ್ರಗೀತೆಯ ನಂತರ ಹಿಳ್ಳಿ ವಿಷಯದಿಂದ ಕಾರ್ಯಕ್ರಮವು ಮುಕ್ತಾಯಗೊಂಡಿತ್ತು.

ಓದುಗರ ಓಲೆಗಳು.

ಮಡಿಕೇರಿ ಹುಡುಗಿಯರ ಹೈಸ್ಕೂಲು ಬೋರ್ಡಿಂಗು.

ಮಡಿಕೇರಿ ಹುಡುಗಿಯರ ಹೈಸ್ಕೂಲಿನ ಕಾರ್ಯಕಲಾಪಗಳೂ ಮತ್ತು ಅದಕ್ಕೆ ಸೇರಿದ ವಿದ್ಯಾರ್ಥಿನಿ ನಿವಾಸಗ್ರಹದ ಏರ್ಪಾಡುಗಳೂ ಸಮರ್ಪಕವಾಗಿಲ್ಲವೆಂದು ಈ ಮೊದಲು ಅನೇಕಬಾರಿ ಅನೇಕರು ಪತ್ರಿಕೆಗಳಲ್ಲಿ ಬರೆದುದಿದೆ. ಆದರೆ ಸರಕಾರವಾಗಲಿ, ಬೇರಾರಾಗಲೀ ಇದರ ವಿಚಾರಗಮನಕ್ಕೆ ತೆಗೆದುಕೊಂಡಂತೆ ಕಾಣುವದಿಲ್ಲ. ಈ ಹೈಸ್ಕೂಲಿಗಾಗಿ ಸರಕಾರದಿಂದ ವಂತಿಗೆ ಕೊಡಲ್ಪಡುತ್ತಿದೆ. ಹಾಗಿರುವಾಗ ಅದರ ಕಾರ್ಯಕಲಾಪಗಳನ್ನು ಪ್ರಶ್ನಿಸುವ ಹಕ್ಕು ಸರಕಾರಕ್ಕೂ, ಜನತೆಗೂ ಇದೆ. ಕಳೆದ ಕೌನ್ಸಿಲು ಸಭೆಯೊಂದರಲ್ಲಿ ಈ ಶಾಲೆಯ ಕಾರ್ಯಕಲಾಪಗಳನ್ನು ಪರಿಶೀಲಿಸುವ ಬಗ್ಗೆ ಒಂದು ಸಮಿತಿಯನ್ನು ನೇಮಿಸಬೇಕೆಂದು ಸೂಚನೆ ಬಂದಿದ್ದಾಗ ಅದು ಖಾಸಗಿ ಸಂಸ್ಥೆಯಾದ್ದರಿಂದ ಅದರಲ್ಲಿ ಕೈಹಾಕಲಾರೆವೆಂದು ಹೇಳಿ ಸರಕಾರವು ಅಪ್ರತ್ಯಕ್ಷವಾಗಿ ಕಾನ್ವೆಂಟ್ ಅಧಿಕಾರಿಗಳ ಬೆನ್ನುತಟ್ಟಿತು. ಕೊಡಗಿನ ಬಡ ರೈತನ ಕಾಸು ಈ ಶಾಲೆಗಾಗಿ ಖರ್ಚಾಗುತ್ತಿರುವಾಗ, ಕೊಡಗಿನ ಬಡ ರೈತನ ಮಕ್ಕಳು ಈ ಶಾಲೆಯಲ್ಲಿ ಓದುತ್ತಿರುವಾಗ ಈ ಶಾಲೆಯ ಕಾರ್ಯಕಲಾಪಗಳನ್ನು ಅರಿಯುವ ಮತ್ತು ಪ್ರಶ್ನಿಸುವ ಹಕ್ಕು ಸರಕಾರಕ್ಕೂ ಜನತೆಗೂ ಇದೆ.

ನನಗೆ ಕೇಳಿ ಬಂದಂತೆ ನಿವಾಸಗ್ರಹದಲ್ಲಿ ಮಕ್ಕಳಿಗೆ ನೀರಿನ ಏರ್ಪಾಡು ಸರಿಯಾಗಿಲ್ಲ. ಹೊಟ್ಟೆ ತುಂಬ ಅನ್ನ ಕೊಡಲ್ಪಡುತ್ತಿಲ್ಲ. ಹಿಂದೆ ವಾರಕ್ಕೆ ಎರಡು ಸಾರಿ ಮೂಸ ಕೊಡಲ್ಪಡುತ್ತಿದ್ದುದು ಈಗ ತಿಂಗಳಿಗೊಮ್ಮೆ! ಸೋರೆಕಾಯಿ, ಮೂಲಂಗಿ, ಬದನೆ ಮೊದಲಾದುವೇ ಪ್ರಖ್ಯಾತ ತರಕಾರಿಗಳು! ಇವುಗಳನ್ನೂ ಕೂಡ ಸರಿಯಾಗಿ ಮೂಡದೆ ಹುಳ ಹುಪ್ಪಡಿ ದೂರೆಯುವದು ಅಪರೂಪವಲ್ಲ. ಬೋರ್ಡಿಂಗಿನಲ್ಲಿ ಬೇರೆ ಸಮಯದಲ್ಲಿ ಮಕ್ಕಳಿಗೆ ಓದಲು ಉಪಯುಕ್ತವಾದ ಯಾವದೇ ಪತ್ರಿಕೆಗಳ ಏರ್ಪಾಡಿಲ್ಲ. ಈ ಯುಗದಲ್ಲೂ ಕೂಡ ಮಕ್ಕಳು ಹೊರಗಿನ ಜಗತ್ತಿನ ವಿಚಾರಗಳನ್ನು ತಿಳಿಯುವ ಅನುವಿಲ್ಲದೆ ಕೂಪ ಮಂಡೂಕಗಳಂತಿರಬೇಕಾಗಿದೆ. ಊಟದ ವ್ಯವಸ್ಥೆಯಲ್ಲೂ ಕ್ರೈಶ್ಚಿಯನ್ ಮಕ್ಕಳಿಗೂ ಇತರರಿಗೂ ತಾರತಮ್ಯವಿದೆಯೆಂದು ವರ್ತಮಾನವಿದೆ. ಇಲ್ಲಿ ಮಕ್ಕಳ ಮೇಲೆ ಖಡ್ಡಾಯ ನಿರ್ಬಂಧ ವಿರಿಸಿರುವದರಿಂದ ಮಕ್ಕಳು ಅಲ್ಲಿಯ ಯಾವ ವಿಚಾರಗಳನ್ನೂ ಹೊರಗೆ ಹೇಳಲಾರರು ಇದೆಲ್ಲ ನಿಜವಾದರೆ ಮತ್ತು ಸರ್ವದಿಕ್ಕಿನಲ್ಲೂ ತೊಂದರೆ ಇದ್ದು ಮಕ್ಕಳು ಕಷ್ಟಪಡುತ್ತಿರುವದಾದರೆ ಸರಕಾರವು ಕುರುಡುಬುದ್ಧಿಯಿಂದ ವರ್ತಿಸುತ್ತಿರುವದೂ, ಮಕ್ಕಳ ಪೋಷಕರು ಜಾಗೃತರಾಗದಿರುವದೂ ಶೋಚನೀಯ. ಇನ್ನಾದರೂ ಎಚ್ಚರಗೊಳ್ಳುವರೇ?

ಮನನೊಂದ ತಾಯಿ.

ಪಿ. ಡಬ್ಲ್ಯು. ಇಲಾಖೆ.

ಪೊನ್ನಂಪೇಟೆ ಟ್ರಾವಲರ್ಸ್ ಬಂಗಿ ರಸ್ತೆಬಳಿ ವ್ಯವಸಾಯ ಇಲಾಖೆಯವರ ಉಪಯೋಗಕ್ಕೆ ಒಂದು ಕಟ್ಟಡ ಕಟ್ಟಲು ಕಳೆದ ವರುಷ ಕೆಲಸ ಪ್ರಾರಂಭಿಸಿ ಜೂನ್ ತಿಂಗಳ ಅಂತ್ಯಕ್ಕೂ ಕೆಲಸ ಪೂರೈಸದೆ, ಗೋಡೆ ಎದ್ದು, ಟ್ಯಿಂಕ್‌ಶೀಟ್ ಹಾಕಬೇಕೆನ್ನುವಷ್ಟರಲ್ಲಿ ಮಳೆ ಜೋರಾಗಿ ಗೋಡೆ ಮರಮಟ್ಟು ಸಮೇತ ಬಿದ್ದು ನೆಲಸಮವಾಯಿತು! ಖಾತಿಗಿ ಜನರ ಕಟ್ಟಡ ಕೆಲಸವಾದರೆ ೨ ತಿಂಗಳ ಕೆಲಸ. ಈ ಇಲಾಖೆಯವರಿಗೆ ೬ ತಿಂಗಳಾದರೂ ಪೂರೈಸದೆ ಎಂಟು ಒಂಭತ್ತು ಸಾವಿರ ರೂಪಾಯಿ ನಷ್ಟಪಡಿಸಿರುವುದಾಗಿ ತಿಳಿಯುತ್ತೆ. ಇದೆಲ್ಲಾ ಯಾರ ಹಣ? ನಷ್ಟಕ್ಕೆ ಜವಾಬ್ದಾರರು ಯಾರು? ಇಂಥಾ ಅನರ್ಥ ಮಾಡಲು ಕಾರಣವೇನು? ಕಟ್ಟಡ ಸಾಮಾನು ವಿಕ್ರಯ ಪಾಲಾಗಿ ಬಿದ್ದಿದೆ. ನಷ್ಟದ ಗೋಚರವೇ ಇಲ್ಲವೆ?

ಈ ವರ್ಷವೂ ಇಟ್ಟಿಗೆ ಸುಟ್ಟು ಕಾಣುತ್ತೆ. ಬಿದ್ದಗೋಡೆ ಮರಮಟ್ಟು ಜಿಂಕ್‌ಶೀಟ್ ಬಿದ್ದಲ್ಲೇ ಕಾಣುತ್ತೆ. ಈ ವರುಷ ಜೂನ್ ಅಂತ್ಯವಾದರೂ ಕೆಲಸ ಪೂರೈಸುತ್ತೋ ಇಲ್ಲವೋ? ವ್ಯವಸಾಯ ಇಲಾಖೆಯವರು ಆಫೀಸ್ ಬಾಡಿಗೆ ಗೊಬ್ಬರ ಸ್ಟಾಕ್ ರೂಮ್ ಬಾಡಿಗೆ ಕೊಟ್ಟು ಕಾಲ ಕಳೆಯುತ್ತಿದ್ದಾರೆ.

ಇಂಥಾ ನಷ್ಟ ಮತ್ತು ಮಂದ ವರ್ತನೆ ಸರಿಯಲ್ಲ. ಇನ್ನಾದರೂ ಸಮ್ಬಂಧಪಟ್ಟ ಇಲಾಖೆಯವರು ಅದಷ್ಟು ಜಾಗ್ರತೆಯಿಂದ ಕಟ್ಟಡ ಕೆಲಸ ಪೂರೈಸುವರೇ?

M. B. S.

ಸಹಾಯ ಯೋಗ್ಯ.

ಮಹಾ ಶಿವರಾತ್ರಿಗೆ ದಕ್ಷಿಣ ಕಾಶಿ ಎನಿಸಿದ ಭಾಗಮಂಡಲ ಕ್ಷೇತ್ರಕ್ಕೆ ಹೋಗಿದ್ದೆ. ಅಲ್ಲಿ ಶ್ರೀರಾಮ ಭಕ್ತಾಧಿಗಳೆಲ್ಲಾ ಸೇರಿ ಕಟ್ಟಿಸಿರುವ ಶ್ರೀರಾಮ ಮಂದಿರವನ್ನು ನನ್ನ ಸ್ನೇಹಿತರೊಡನೆ ನೋಡಿದೆ. ಯಾತ್ರಿಕರಿಗೆ ಉಳಕೊಳ್ಳಲು ಬಹಳ ಪ್ರಯೋಜನಕಾರಿಯಾಗಿರುವ ಈ ಕಟ್ಟಡವನ್ನು ಕಟ್ಟಿದವರಿಗೆ ವಂದಿಸದೆ ಸಾಧ್ಯವಿಲ್ಲ. ಇಲ್ಲಿ ಉಳಕೊಂಡವರಿಗೆ ಅಡಿಗೆಮಾಡಿ ಊಟ ಮಾಡುವ ಸೌಕರ್ಯವಿಲ್ಲ. ಈ ವಿಚಾರ ಕೇಳಲಾಗಿ ಈ ಶ್ರೀರಾಮ ಮಂದಿರದ ಅಧ್ಯಕ್ಷರು ಒಂದು ಭೋಜನ ಶಾಲೆಯನ್ನು ಕಟ್ಟುವ ಏರ್ಪಾಡು ಮಾಡಿಕೊಂಡಿದ್ದರೂ ಹಣದ ಅಭಾವದಿಂದ ಯೋಜನೆಯು ಹಾಗೆಯೇ ಉಳಿದಿದೆಯೆಂದೂ ಇದೂ ಅಲ್ಲದೆ ನೀರಿನ ಸೌಕರ್ಯಕ್ಕಾಗಿ ಬಾವಿಯನ್ನು ತೆಗೆಯುವ ಏರ್ಪಾಡಿದ್ದು ಅದೂ ಹಣದ ಅಡಚಣೆಯಿಂದ ಬಾಕಿಯಾಗಿರುತ್ತೆ ಎಂದೂ ಹೇಳಿದರು. ಆದುದರಿಂದ ಈ ಮೇಲಿನ ಸೌಕರ್ಯಗಳನ್ನು ಒದಗಿಸುವುದು ಅತ್ಯಗತ್ಯ. ಇದರಿಂದ ಯಾತ್ರಿಕರಿಗೆ ತುಂಬಾ ಪ್ರಯೋಜನವಿದೆ. ನಮ್ಮ ದೇಶದ ಸರ್ವ ಭಕ್ತರೂ ಉದಾರ ಮನಸ್ಸುಮಾಡಿ ಧನಸಹಾಯವೂಡಿ ಯೋಜನೆಯನ್ನು ನೆರವೇರಿಸಲು ಸಹಾಯ ಮಾಡಿದರೆ ಸರ್ವ ಜನೋಪಯೋಗಿ ಈ ಕೆಲಸದಿಂದ ಎಲ್ಲರ ಹಿತಸಾಧಿಸಿದಂತಾಗುವುದು.

'ತೀರ್ಥಾರ್ಥಿ'

Coorg Civil Surgeon's Office,
Meraara, the 25th Feb. 1950

WANTED.

Six women candidates to undergo training, as Rural Midwives, at the Civil Hospital, Mercara, for 12 months, on a stipend of Rs. 25/- per mensem and Rs. 50/- towards equipment allowance after the completion of training.

The candidates must have completed III Form examination and must be between 25 and 35 years of age. Those living in villages will be given preference.

Relaxation of age limit and educational qualification, in special cases, will be considered, if candidate deserved selectfon on other considerations Candidates with higher qualifications will be preferred.

Applications must reach the Civil Surgeon, Coorg, Mercara, on or before 25-3-50. The course will commence from 1-4-1950.

ಸಿವಿಲ್ ಸರ್ಜನರ ಆಫೀಸು.
ಮಡಿಕೇರಿ ತಾ: ೨೫-೨-೫೦

ಬೇಕಾಗಿದ್ದಾರೆ.

ಮಡಿಕೇರಿ ಸಿವಿಲ್ ಆಸ್ಪತ್ರೆಯಲ್ಲಿ ಗ್ರಾಮಾಂತರ ಸೂಲಗಿತ್ತಿಯರಾಗಿ ತರಬೇತು ಹೊಂದಲು ಆರುಜನ ಉಮೇದುವಾರರು ಜೇಕಾಗಿದ್ದಾರೆ. ತರಬೇತಿನ ಅವಧಿಯು ೧೨ ತಿಂಗಳುಗಳ ವರೆಗಿದ್ದು ಮಾಸಿಕ ರೂ. ೨೫/- ರ ವಿದ್ಯಾರ್ಥಿ ವೇತನವೂ ತರಬೇತು ಪೂರ್ತಿಯಾದ ನಂತರ ಅವಶ್ಯವಿರುವ ಸಾಹಿತ್ಯಗಳಿಗಾಗಿ ರೂ. ೫೦/- ಧನಸಹಾಯವೂ ಕೊಡಲ್ಪಡುವದು.

ಉಮೇದುವಾರರು ಮೂರನೇ ಫಾರಂ ಪೂರ್ತಿ ಮಾಡಿದವರಾಗಿದ್ದು ೨೫ ರಿಂದ ೩೫ ವಯಸ್ಸಿನೊಳಗಿರುವವರಾಗಿರಬೇಕು. ಗ್ರಾಮಾಂತರದಲ್ಲಿರುವವರಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಗುವದು.

ಇತರ ಕಾರಣಗಳಿಂದ ಆರಿಸಲ್ಪಡಲು ಯೋಗ್ಯರಾಗಿದ್ದರೆ ವಯಸ್ಸಿನ ಮತ್ತು ವಿದ್ಯಾ ಶರತ್ತುಗಳನ್ನು ವ್ಯತ್ಯಾಸ ಮಾಡುವದನ್ನು ಆಲೋಚಿಸಲಾಗುವದು. ಹೆಚ್ಚಿನ ಯೋಗ್ಯತೆ ಇರುವವರಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಲ್ಪಡುವದು.

ಅರ್ಜಿಗಳು ತಾರೀಕು ೨೫-೩-೫೦ ರೊಳಗೆ ಸಿವಿಲ್ ಸರ್ಜನ್ ಕೊಡಗು ಮಡಿಕೇರಿ ಇವರಿಗೆ ಮುಟ್ಟಬೇಕು. ತರಬೇತು ತಾ. ೧-೪-೫೦ ರಿಂದ ಪ್ರಾರಂಭವಾಗುವದು.

ಟಿ. ಬಿ. ಮೇದಪ್ಪ,
ಸಿವಿಲ್ ಸರ್ಜನ್, ಕೊಡಗು.

(೪ ನೇ ಪುಟದಿಂದ ಸಾಗಿದ್ದು)

(೯) ಪ್ರಾಂತೀಯ ಕಾಂಗ್ರೆಸು ಸಮಿತಿಯವರು ಕಾಂಗ್ರೆಸು ಪಂಚಾಯಿತಿ ಚುನಾವಣೆಗಳ ಬಗ್ಗೆ ಒಂದು ವೇಳಾಪತ್ರಿಕೆಯನ್ನು ಮೂಡುವರು. ಆ ಅವಧಿಯಲ್ಲಿ ಚುನಾವಣೆಗಳು ನಡೆಯುವವು.

(೧೦) [ಅ] ಪ್ರತಿಯೊಂದು ಪಂಚಾಯತಿಯ ಚುನಾವಣೆ ಕಾರ್ಯಕ್ರಮವು ತಾಲೂಕು, ತಹಶೀಲ, ಮಹಾಲ, ಸರ್ಕಲ್ ಇಲ್ಲವೆ ಶಹರ ಕಾಂಗ್ರೆಸ್ ಕಮಿಟಿಯ ಕಚೇರಿಯಲ್ಲಿ ಪ್ರಸಿದ್ಧ ಮಾಡಲಾಗುವದು. ಈ ಕಾರ್ಯಕ್ರಮದಲ್ಲಿ [೧]-ನಾಮಪತ್ರ ಕೊಡುವ ಹಾಗೂ ಪರಿಶೀಲನೆಯ ತಾರೀಕುಗಳು. (೨) ನಾಮಪತ್ರ ಪರಿಶೀಲನೆಯ ಪರಿಣಾಮವನ್ನು ಪ್ರಸಿದ್ಧ ಮಾಡುವ ತಾರೀಕು. (೩) ಅಪೀಲು ಮೂಡುವ ತಾರೀಕು ಹಾಗು (೪) ಚುನಾವಣೆ ತಾರೀಕುಗಳನ್ನು ಕಾಣಿಸಬೇಕು.

(೧೦) [ಬ] ಚುನಾವಣೆಯ ಕಾರ್ಯಕ್ರಮವನ್ನು ವರ್ತಮಾನ ಪತ್ರಿಕೆಗಳಲ್ಲಿ ಪ್ರಸಿದ್ಧ ಮಾಡಿ, ಡಂಗುರ ಸಾರಿಸಿ, ಇಲ್ಲವೆ ಹಸ್ತಪತ್ರಿಕೆಗಳನ್ನು ಹಂಚಿ-ಹೆಚ್ಚು ಜನರಿಗೆ ಗೊತ್ತಾಗುವಂತೆ ಜಾಹೀರುಮಾಡಬೇಕು.

(೧೧) ಚುನಾವಣೆಗೆ ನಿಲ್ಲುವ ಉಮೇದುವಾರನು ಒಂದು ರೂಪಾಯಿ [೧-೦-೦] ಫೀಯನ್ನು ನಾಮಪತ್ರದೊಂದಿಗೆ ತುಂಬಬೇಕು. ಮತ್ತು ನಾಮಪತ್ರವನ್ನು ಲೇಖಿಯಲ್ಲಿ ತಾಲೂಕು ಚುನಾವಣೆ ಅಧಿಕಾರಿಯ ಕಡೆಗೆ ಸಲ್ಲಿಸಲ್ಪಡಬೇಕು. ತಡವಾಗಿ ಬಂದ ನಾಮಪತ್ರಗಳು ನಿರಾಕರಿಸಲ್ಪಡುವವು. ತಾಲೂಕು ಚುನಾವಣೆಯ ಅಧಿಕಾರಿಯು ಗೊತ್ತು ಮಾಡಿದ ಅವಧಿಯೊಳಗಾಗಿ ಬಂದ ನಾಮಪತ್ರಗಳ ಪರಿಶೀಲನೆ ಮಾಡಿ ಹಾಗು ಪರಿಶೀಲನೆಯ ಪರಿಣಾಮವನ್ನು ಪ್ರಸಿದ್ಧ ಮಾಡಿ ಪಂಚಾಯತಿಯ ಚುನಾವಣೆಯ ಅಧಿಕಾರಿ ಕಡೆಗೆ ಸ್ವೀಕೃತವಾದ ನಾಮಪತ್ರಗಳನ್ನು ಕೊಡುವನು. ನಿರಾಕರಿಸಲಾದೆ ಉಮೇದುವಾರರು ಜಿಲ್ಲಾ ಚುನಾವಣೆ ಅಧಿಕಾರಿಯ ಕಡೆಗೆ ಅಪೀಲು ಮಾಡಿಕೊಳ್ಳಬಹುದು.

(೧೨) ಪಂಚಾಯತಿ ಚುನಾವಣೆ ಅಧಿಕಾರಿಯು ಗೊತ್ತು ಮಾಡಿದ ತಾರೀಕು, ಸ್ಥಳ, ವೇಳೆಗಳಲ್ಲಿ ಪಂಚಾಯತಿಯ ಮತದಾರರ ಸಭೆ ಕೂಡಿಸಿ, ಸಾಧಾರಣವಾಗಿ ಕೈಯೆತ್ತಿಸಿ ಅವಶ್ಯವೆನಿಸಿದರೆ ಗುಪ್ತ ಮತದಾನ ಮಾಡಿಸಿ ಪಂಚರ ಚುನಾವಣೆ ನಡೆಸುವನು. ಚುನಾವಣೆಯು ತಾರೀಕು, ಸ್ಥಳ ಮತ್ತು ವೇಳೆಗಳನ್ನು ಪಂಚಾಯತಿಯ ಹದ್ದಿನೆಲ್ಲಿ ಪ್ರಸಿದ್ಧಿಸಬೇಕು. ಚುನಾವಣೆಯು ಪಂಚಾಯತಿಯ ಕಚೇರಿ ಇರುವ ಊರಲ್ಲಿಯೇ ನಡೆಯುವದು. ಚುನಾವಣೆಯ ಅಧಿಕಾರಿಯೇ ಸಭೆಯ ಅಧ್ಯಕ್ಷನಾಗುವನು.

(೧೩) ಪಂಚಾಯತಿಯ ಚುನಾವಣೆ ಅಧಿಕಾರಿಯು ಚುನಾವಣೆಯ ಪರಿಣಾಮದ ವರದಿಯನ್ನು ಕೂಡಲೇ ತಾಲೂಕು ಚುನಾವಣೆ ಅಧಿಕಾರಿಯ ಕಡೆಗೆ ಕೊಡುವನು. ಈ ವರದಿಯಲ್ಲಿ ಪ್ರತಿಯೊಬ್ಬ ಉಮೇದುವಾರನು ದೊರಕಿಸಿದ ಮತಗಳ ಹಾಗು ಜಯ ಹೊಂದಿದ ಉಮೇದುವಾರರ ವೂಹಿತಿಕೊಡತಕ್ಕದ್ದು.

ವೆಂಕಟೇಶ ಮೂಗಡಿ.
ಪ್ರಧಾನ ಕಾರ್ಯದರ್ಶಿ.

(೨ನೇ ಪುಠದಿಂದ ಸಾಗಿದ್ದು)

ಗಳಿದ್ದವು. ಮತದಾರರಲ್ಲಿ ೧೧,೯೯೨, ೫೯೨ ಜನರು ಲೇಬರ್ ಪಕ್ಷಕ್ಕೂ, ೮,೬೬ ೫,೫೬೬ ಜನರು ಟೋರಿ ಪಕ್ಷಕ್ಕೂ, ೨,೨ ೩೯,೬೬೮ ಜನರು ಲಿಬರಲ್ ಪಕ್ಷಕ್ಕೂ ಆಗಮತ ಕೊಟ್ಟಿದ್ದರು. ಈ ಚುನಾವಣೆಯಲ್ಲಿ ಲೇಬರ್ ಪಕ್ಷವು ಸುಮಾರು ೭೫ ಸ್ಥಾನಗಳನ್ನು ಕಳಕೊಂಡರೂ ಕಳೆದ ಚುನಾವಣೆಗಿಂತಾ ಹತ್ತು ಲಕ್ಷಕ್ಕಿಂತಾ ಹೆಚ್ಚಿನ ಜನರ ಮತವನ್ನು ಪಡೆದಿದೆ. ಕನ್‌ಸರ್ವೇಟಿವ್ ಪಕ್ಷದವರು ಕಳೆದ ಸಾರಿಗಿಂತಾ ಸುಮಾರು ೪೦ ಲಕ್ಷ ಹೆಚ್ಚಿನ ಮತ ಪಡೆದಿದ್ದಾರೆ.

ಲೇಬರ್ ಪಕ್ಷಕ್ಕೆ ಬಂದ ಬಹುಮತವು ತುಂಬಾ ಕಡಿಮೆಯೆಂದೂ ಆದ್ದರಿಂದ ಸರಕಾರವನ್ನು ಸಲೀಸಾಗಿ ನಡೆಸುವದು ಕಷ್ಟವೆಂದೂ ಹೇಳಲಾಗುತ್ತಿದೆ. ಇದಕ್ಕೆ ಪ್ರಧಾನ ಆಟ್ಲಿಯವರು ಉತ್ತರವೀಯುತ್ತಾ ಅದು ಹಾಗಾಗುವದಿಲ್ಲವೆಂದೂ ಅಲ್ಪ ಸಂಖ್ಯಾತ ಪಕ್ಷಗಳೂ ಕೂಡ ಸರ್ಕಾರ ನಿರ್ವಹಿಸಿರುವ ನಿದರ್ಶನವಿದೆಯೆಂದೂ ಬಹುಮತವಿರುವ ಲೇಬರ್ ಪಕ್ಷವು ನಿರಾತಂಕವಾಗಿ ತನ್ನ ಆಡಳಿತವನ್ನು ಮುಂದರಿಸುವದೆಂದೂ ಹೇಳಿದ್ದಾರೆ.

ಮುಂದಿನ ವಾರ ಮಂತ್ರಿಮಂಡಳ ಏರ್ಪಡುವದು.

ಚಹಾದ ಕಥೆ.

ಯಾವುದೊಂದು ವಸ್ತುವಿನ ಪ್ರಯೋಜನವು ಕಂಡು ಹಿಡಿಯಲ್ಪಡುವುದಕ್ಕೆ ಒಂದೊಂದು ಮನೋರಂಜಕ ಪ್ರಸಂಗವು ಕಾರಣವಾದದ್ದು ಕಂಡುಬರುತ್ತದೆ. ಚಹಾದ ಉಪಯೋಗವೂ ಅದೇ ಮೇರೆಗೆ ಕಂಡು ಹಿಡಿಯಲ್ಪಟ್ಟಿತೆಂದು ಹೇಳಲ್ಪಟ್ಟಿದೆ.

ಚಹಾ ಇದು ಮೊದಲು ಚೀನದಲ್ಲಿ ಪ್ರಾರಂಭವಾಯಿತು ಎಂದು ಗೊತ್ತಾಗಿದೆ ಆದರೆ ಈ ಬಗ್ಗೆ ಕೂಡ ಅನೇಕ ಮತಭೇದಗಳಿವೆ. ಈ ವಿಷಯವಾಗಲ್ಲಿದ್ದ ಅಭಿಪ್ರಾಯಗಳು ಕಳೆದ ನಾಲ್ಕು ಸಾವಿರ ವರ್ಷಗಳಿಂದ ವ್ಯಕ್ತಪಡಿಸಲ್ಪಟ್ಟಂಥವಾಗಿವೆಯೆಂಬುದು ಗೊತ್ತಾಗಿದೆ. ಮೂರನೇ ಶತಮಾನದಲ್ಲಿ, ಓರ್ವ ಪ್ರಸಿದ್ಧ ವೈದ್ಯನು 'ಒಂದೇ ಸವನೆ ಚಹಾ ಕುಡಿದರೆ ಮನುಷ್ಯನ ವಿಚಾರ ಶಕ್ತಿಯು ಪ್ರಭಾವಿಸುತ್ತದೆ' ಎಂದು ಹೇಳಿದ ವಿಷಯವು ತಿಳಿದುಬಂದಿದೆ. ಜಪಾನಿನ ಪುರಾಣಗಳಲ್ಲಿ ಒಂದು ಕಥೆ ಈ ರೀತಿಯಾಗಿದೆ:-

ಅಲ್ಲಿನ ಓರ್ವ ಬುದ್ಧ ಸನ್ಯಾಸಿಯು ಧ್ಯಾನದಲ್ಲಿ ನಿರತನಾಗಿದ್ದನು. ಆದರೆ ಅವನಲ್ಲಿ ಆ ವಿಷಯಕ್ಕಾಗಿ ಇರಬೇಕಾಗಿದ್ದ ಜಾಗ್ರತಿಗೆ ನಿದ್ರೆಯಿಂಪ ಭಂಗವುಂಟಾಗುತ್ತಿತ್ತು. ಆದನ್ನು ಹಿಮ್ಮೆಟ್ಟಿಸಲೋಸುಗ ಅವನು ಎಡಬಲವಲ್ಲಿ ಸಿಗುತ್ತಿದ್ದ ಒಂದು ಜಾತಿಯ ಎಲೆಯನ್ನು ತಿನ್ನುತ್ತಿದ್ದನು. ಅದರಿಂದ ತನಗೆ ಉತ್ತೇಜನ ಬಂದಂತಾಗಿ ಹೆಚ್ಚಿನ ಜಾಗ್ರತಾವಸ್ಥೆಯು ಉಂಟಾಗುತ್ತದೆ ಎಂದು ಅವನು ಹೇಳುತ್ತಿದ್ದನಂತೆ.

ಈ ಮಾಹಿತಿಯು ಅವನ ಅನುಭವನ್ನು ಕಂಡು, ಅಲ್ಲಿಯ ಜನರು ಆ ಎಲೆಯನ್ನು ಕುದಿಸಿ ಕುಡಿಯಲು ಪ್ರಾರಂಭಿಸಿದರು. ಇದೇ ರೀತಿಯ ಅನೇಕ ಸಂಗತಿಗಳನ್ನೂ ಉಲ್ಲೇಖಗಳನ್ನೂ ನೋಡಿದರೆ ಚಹಾದ ಉಪಯೋಗವು ಬಹು ದಿವಸಗಳಿಂದ ನಡೆದುಬಂದ ವಿಷಯವೆಂಬುದರಲ್ಲಿ ಸಂಶಯವೇನೂ ಇಲ್ಲ.

ಲಾಭ—ಹಾನಿ.

ಚಹಾ ಪಾನದ ವಿಷಯವು ಇಂದು ಹೆಚ್ಚಿನ ಗೌರವಸ್ಥಾನವನ್ನು ಪಡೆದಿದೆ. ಅದಿಲ್ಲವಿದ್ದರೆ ಯಾವ ವ್ಯಾಪಾರಂಭಗಳೂ ಸಂಪೂರ್ಣವಾಗುತ್ತಿಲ್ಲ ಯಾವುದೇ ವಸ್ತುವಿನಲ್ಲಿ ಗುಣ ಅವಗುಣಗಳೆಡೂ ಇರುವಂತೆ ಚಹಾದಲ್ಲಿಯೂ ಇರುವವು. ಔಷಧದಂತೆ ಅದನ್ನು ಉಪಯೋಗಿಸಿದರೆ ಸಹಾಯಕಾರಿಯಾಗಿದೆ. ಆದನ್ನು ರೋಗಿಗೆ ಕುಡಿಸಿದರೆ ಉತ್ತೇಜನ, ಹಗರು ಹೊಟ್ಟೆ ಮತ್ತು ನೀರಡಿಕೆಯನ್ನು ಕಡಿಮೆಮಾಡುವುದು ಇವೇ ಮೊದಲಾದ ಸಹಾಯಗಳನ್ನು ಮಾಡುವುದು.

ಆದರೆ ಅದನ್ನು ಕುಡಿಯುವುದನ್ನು ಒಂದು ಚಟವನ್ನೇ ಆಗಿ ಮಾಡಿಕೊಂಡರೆ ಅದರಿಂದ ಬಹಳ ಹಾನಿಯುಂಟು. ಆದರ ಪ್ರಯೋಜನದ ವಿಷಯವನ್ನು ತೆಗೆದುಕೊಂಡು ಅನೇಕರು ಹೊಗಳಿದ್ದುಂಟು. ಆದೇ ಮೇರೆಗೆ ಅವರಿಂದಾಗುವ ಹಾನಿಯ ವಿಷಯವಲ್ಲಿಯೂ ಅನೇಕರು ಎಚ್ಚರಿಕೆ ಕೊಟ್ಟಿದ್ದಾರೆ. ಮತ್ತು ನಾವು ನಮ್ಮ ದೈನಂದಿನ ಜೀವನದಲ್ಲಿ ಅವರ ಪರಿಣಾಮವನ್ನು ಸಾಕ್ಷಾತ್ತಾಗಿ ನೋಡುತ್ತಿದ್ದೇವೆ.

ಓರ್ವ ಜರ್ಮನನು 'ಚಹಾ ಕುಡಿಯುವುದರಿಂದಲೇ ಚೀನೀಯರ ಮೇರೆಯ ಮೇಲೆ ಸಪ್ಪೆಯೂಪಕಳೆ ಉಂಟಾಗಿದೆ' ಎಂದು ಹೇಳಿದ್ದಾನೆ.

ಮತ್ತೊಬ್ಬ ಪಾಶ್ಚಾತ್ಯ ಪ್ರವಾಸಿಯು 'ಇದರಿಂದ ಮನುಷ್ಯನು ದೈಹಿಕ ಮತ್ತು ಮಾನಸಿಕ ತೇಜಸ್ಸನ್ನು ಕಳೆದುಕೊಂಡಿದ್ದಾನೆ. ಸ್ತ್ರೀಯರು ತಮ್ಮ ಚೆಲುವಿಕೆಯನ್ನು ಕಳೆದುಕೊಂಡಿದ್ದಾರೆ' ಎಂದು ಬರೆದಿದ್ದಾನೆ.

ಬಂಗಾಲದ ಸರ್ ಪಿ. ಸಿ. ರಾಯರಂತೂ 'ಚಹಾ ವಿಷಸ್ವರೂಪಿಯಾಗಿದೆ. ಬಿ ಹೊಟ್ಟೆಗೆ ಚಹಾ ಕುಡಿದರೆ ಅದು ಯಕೃತ್ತಿನ ಮೇಲೆ ಪರಿಣಾಮ ಮಾಡುತ್ತದೆ. ಅಳತೆಗೆಟ್ಟು ಚಹಾ ಕುಡಿದರೆ ಸಾಮಾನ್ಯ ಆರೋಗ್ಯದ ಮೇಲೆ ಅದು ಪರಿಣಾಮ ಮಾಡುತ್ತದೆ' ಎಂದು ಹೇಳಿದ್ದಾರೆ.

ನಿಜವಾದ ಚಟಗಾರರು ಚಹಾವನ್ನು ಬರಿಹೊಟ್ಟೆಯಿಂದ ಕುಡಿಯುವುದೇ ಬಹಳ ಮತ್ತು ಲೆಕ್ಕವಿಲ್ಲದೆ ಅದನ್ನು ದಿವಸಕ್ಕೆ ಹತ್ತಿಪ್ಪತ್ತು ಸಲ ಕುಡಿಯುವವರೂ ಇದ್ದಾರೆ. ಅದರಿಂದ ಎಂತಹ ಪರಿಣಾಮವು ಆಗುವುದೆಂಬುದಕ್ಕೆ ಅನೇಕ ಸಾಕ್ಷಿಗಳಿವೆ.

ಪೇಯ ಸಿದ್ಧತೆ.

ಚಹಾ ಮಾಡುವ ಪದ್ಧತಿಗಳಲ್ಲಿ ಅನೇಕ ಪ್ರಕಾರಗಳಿವೆ. ಯಾರಿಗೆ ಹೇಗೆ ಮಾಡಿದರೆ ರುಚಿಯೆನಿಸುವುದೋ ಆ ರೀತಿಯಲ್ಲಿ ಅದನ್ನು ಸಿದ್ಧಮಾಡುತ್ತಾರೆ. ಪುಡಿಯನ್ನು ಸಿದ್ಧಮಾಡುವ ಅನೇಕ ಕಂಪನಿಗಳಿದ್ದು ಅವುಗಳ ಸಿದ್ಧತೆಯು ವಿವಿಧ ಸ್ವರೂಪದ್ದಾಗಿರುತ್ತದೆ. ದೇಶ ದೇಶಗಳ ಭಿನ್ನತ್ವದ ಮೂಲಕ ಈ ಪೇಯದ ಸ್ವರೂಪ ಮತ್ತು ಸಿದ್ಧತೆಗಳಲ್ಲಿ ವಿವಿಧತ್ವವು ಕಂಡು ಬರುತ್ತದೆ.

ಉಷ್ಣವಾನವು ಅಥವಾ ಬಿಸಿ ಆಹಾರದ ಜೀವನವು ಅಪಾಯಕರವೆಂದು ನಮ್ಮ ಪೂರ್ವಜರು ಮತ್ತು ಆರೋಗ್ಯ ಶಾಸ್ತ್ರಜ್ಞರು ಹೇಳಿದ್ದಾರೆ. ಆದರೆ ಚಹಾ ಪಾನವು ಆ ಮಾತನ್ನು ಸಂಪೂರ್ಣವಾಗಿ ಅಲಕ್ಷಿಸುತ್ತದೆ. ಅಷ್ಟೇ ಏಕೆ? ಚಟಗಾರರು ಅಭ್ಯಾಸದ ಮೂಲಕ ಚಹಾ ಎಷ್ಟೇ ಬಿಸಿಯಾಗಿದ್ದರೂ "ಆರಿದೆ" ಎಂಬ ಅಭಿಪ್ರಾಯಪಡುವ ಪರಿಸ್ಥಿತಿಗೆ ಬಂದು ಮುಟ್ಟಿದ್ದಾರೆ.

ಹಾಗೆ ನೋಡಿದರೆ ಕೆಲವು ಕಡೆ ತಣ್ಣಗಾದ ಬಳಿಕ ಚಹಾ ಕುಡಿಯುವ ಪದ್ಧತಿಯಿದೆ. ಚಹಾ ಕಷಾಯಕ್ಕೆ ಹಾಲು ಬೆರೆಸದೆ ಕುಡಿಯುವ ಪದ್ಧತಿಯು ಕೆಲವು ಕಡೆಗಿದೆ. ಪಾಶ್ಚಾತ್ಯ ದೇಶಗಳಲ್ಲಿ ಈ ಪರಿವರ್ತನವನ್ನು ಕಾಣಬಹುದು. ಕಾಫಿಯಲ್ಲಿ ಕೂಡ ಹಾಲು ಹಾಕದೆ ಅವರು ಕುಡಿಯುತ್ತಾರೆ.

ಅದರ ಪ್ರಸಾರ

ಚೀನದ ಕಡೆಗೆ ಬಂದ ಪ್ರವಾಸಿಗರು ಚಹಾವನ್ನು ಪಾಶ್ಚಾತ್ಯ ದೇಶಕ್ಕೆ ಒಯ್ದರು. ಡಚ್ಚರು ಆ ಕೆಲಸವನ್ನು ಮೊಡಿದರು. ಪೊರ್ತುಗೀಸ್ ಪ್ರವಾಸಿಗಳಿಗೂ ಈ ವಿಷಯದ ಶ್ರೇಯಸ್ಸಿನ ಕೆಲಭಾಗವು ಸಲ್ಲುತ್ತದೆ. ಆನಂತರ ಚಹಾ, ಯುರೋಪಕ್ಕೆ ೧೬೧೦ ನೇ ಇಸ್ವಿಯಲ್ಲಿ ಹೋಯಿತು. ಇಂಗ್ಲಂಡವು ಅದರ ಪರಿಯನ್ನು ಮೊದಲಿಗೆ ೧೬೪೯ರಲ್ಲಿ ನೋಡಿತು. ಅಮೇರಿಕೆಯಲ್ಲಿ ಅದು ೧೬೭೦ರಲ್ಲಿ ಪ್ರವೇಶಿಸಿತು. ಮೊದಮೊದಲು, ಅದರ ಉಪಯೋಗವು ಶ್ರೀಮಂತರಲ್ಲಿ ನಡೆಯುತ್ತಿತ್ತು.

ನಿಜವಾಗಿ ನೋಡಿದರೆ ಹಿಂದೂಸ್ಥಾನಕ್ಕೆ ಈ ವಸ್ತುವು ಬಹಳ ತಡವಾಗಿ ಬಂದಿತು. ಇದರ ಉಪಯೋಗವು ನಮ್ಮಲ್ಲಿ ಸಾರ್ವತ್ರಿಕವಾಗಿ ಹಬ್ಬಿದುದೆಂದರೆ, ೨೦ನೇ ಶತಮಾನದ ಆರಂಭದಲ್ಲಿಯೇ ಎಂದು ಹೇಳಬೇಕು. ಆದರೆ ಅದನ್ನು ಬೆಳೆಯುವ ಕಾರ್ಯವು ಮಾತ್ರ ಹತ್ತೊಂಬತ್ತನೇ ಶತಮಾನದ ಮೊದಲನೆಯ ಅರ್ಧದಲ್ಲಿಯೇ ಪ್ರಾರಂಭವಾಯಿತು.

ವ್ಯಾಪಾರೀ ವಿಸ್ತಾರ.

ಚೀನಕ್ಕೆ ಹತ್ತಿರ ಹಿಂದುಸ್ಥಾನದಲ್ಲಿ ಮತ್ತು ಬರ್ಮಾದಲ್ಲಿಯೂ ಈ ವನಸ್ಪತಿಯು ಬೆಳೆಯುತ್ತಿರಬೇಕೆಂಬ ಮಾತು ಬ್ರಿಟಿಷರ ತಲೆಯಲ್ಲಿ ಬಂದಿತು. ಏಕೆಂದರೆ ಚೀನದ ಕಡೆಗೇ ಅವರ ಹುಟ್ಟುವಳಿಯು ಗುತ್ತಿಗೆಯು ಇರುವುದು ಅವರಿಗೆ ಲಾಭಕರವಾಗಿ ತೋರಲಿಲ್ಲ. ಆದ್ದರಿಂದ ಅವರು ತಮ್ಮಲ್ಲಿಯ ವನಸ್ಪತಿ ಶಾಸ್ತ್ರಜ್ಞರನ್ನು ಕರೆಸಿ ಹಿಂದುಸ್ಥಾನದಲ್ಲಿ ಅದನ್ನು ಬೆಳೆಯುವ ಸಾಧ್ಯಾಸಾಧ್ಯತೆಯ ಬಗ್ಗೆ ಸಲಹೆ ಪಡೆದರು. ಕೆಲವು ಪಾದ್ರಿಗಳನ್ನು ಚೀನಕ್ಕೆ ಕಳುಹಿಸಿ ಅದರ ವಿವರಗಳನ್ನು ತಿಳಿದುಕೊಂಡು ಬರಲು ಹೇಳಿದರು. ಆದರಿಂದ ಹೆಚ್ಚಿನ ಲಾಭವೇನೂ ಆಗಲಿಲ್ಲ.

೧೮೨೩ರಲ್ಲಿ ರಾಬರ್ಟ್ ಬ್ರೂಸ ಎಂಬವನು ಅಸಾಮದಲ್ಲಿ ಚಹಾ ಬೆಳೆಯುತಿದೆ ಎಂಬುದನ್ನು ಕಂಡುಹಿಡಿದು ಹೇಳಿದನು. ೧೮೩೫ರಲ್ಲಿ ಹಿಂದೂಸ್ಥಾನದಲ್ಲಿ ಬೆಳೆಸಿ ಚಹಾದ ಬೀಜಗಳನ್ನು ಪರೀಕ್ಷೆಗಾಗಿ ಇಂಗ್ಲಂಡಕ್ಕೆ ಕಳುಹಿಸಿದರು. ಮುಂದೆ ಮೂರು ವರ್ಷಗಳಲ್ಲಿ ಅದರ ಮೂರಾಟವಾಗಲು ಪ್ರಾರಂಭವಾಯಿತು. ಮೊದಮೊದಲು ಈ ಉದ್ಯೋಗವನ್ನು ಭಾರತದಲ್ಲಿ ಸರಕಾರವೇ ಮಾಡುತ್ತಿತ್ತು. ಅದರ ಹುಟ್ಟುವಳಿ ಮತ್ತು ವ್ಯಾಪಾರವು ಒಳ್ಳೇ ಭರದಿಂದ ನಡೆಯುತ್ತಲಿರಲು ೧೮೭೮ನೇ ಇಸ್ವಿಯಲ್ಲಿ ಅದನ್ನು ವೈಯಕ್ತಿಕ ಪ್ರಯತ್ನಕ್ಕೆ ಬಿಟ್ಟುಕೊಟ್ಟರು. ಆದನ್ನು ಕೂಡ ಬ್ರಿಟಿಷ ಕಂಪೆನಿಗಳೇ ಬಹಳ ದಿವಸಗಳ ವರೆಗೆ ನಡೆಸಿಕೊಂಡು ಬಂದವು. ಇತ್ತ ಕಡೆಗೆ ಅವರೂ ಬಿಟ್ಟು ಹೋದದ್ದರಿಂದ ಮತ್ತು ಹೋಗುತ್ತಿರುವುದರಿಂದ ಆ ಉದ್ಯೋಗವು ದೇಶೀಯರ ಕೈಯಲ್ಲಿ ಬರುತ್ತಿದೆ.

ಇಂದು ಭಾರತ, ಚೀನ, ಪಾಕಿಸ್ತಾನ, ಸಿಂಹಳದ್ವೀಪ, ಇಂಡೋನೇಶಿಯಾ, ಜಪಾನ, ಪ್ರೌರ್ನೋಸಾ, ಮಲಯಾ, ಬರ್ಮಾ, ಇಂಡೋಚಾಯನಾ, ಫಿಜಿ, ಜೈನಾಟಾಲ್, ಮಸ್ಕರೇನ್ಹಸ್ ಐಲ್ಯಾಂಡ್ಸ್, ಸೌತ್ ಕ್ಯಾರೋಲ್ಯಾನ್ಸ್, ಆಫ್ರಿಕಾದೇಶಗಳಲ್ಲಿ ಚಹಾ ಬೆಳೆಯಲ್ಪಡುತ್ತಿದೆ. ಇವುಗಳಲ್ಲಿ ಚೀನದ ಹುಟ್ಟುವಳಿಯು ಎಲ್ಲಕ್ಕೂ ಹೆಚ್ಚು ಇದೆ. ಆದರ ತರುವಾಯ ಹಿಂದುಸ್ಥಾನದ್ದೇ ಬರುತ್ತದೆ. ವ್ಯಾಪಾರದ ವಿಷಯದಲ್ಲಿ ಹಿಂದುಸ್ಥಾನವು ಎಲ್ಲಕ್ಕೂ ಹೆಚ್ಚಿನ ಕೇಂದ್ರವಾಗಿದೆ.

ಜೈ ಹಿಂದ್.

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,

ಫ್ಯೇಜರ್ ಪೇಟೆ.

ಬೇಕಾಗಿದ್ದಾರೆ.

ಕೊಡಗಿನ ಪ್ರತಿ ಗ್ರಾಮ ಮತ್ತು ಪಟ್ಟಣಗಳಲ್ಲಿ ಬಿದ್ದು ಮಣ್ಣಾಪಾಲಾಗಿ ಹೋಗುತ್ತಿರುವ ಮೂಳೆಗಳನ್ನು ಶೇಖರಿಸಿಕೊಡಲು ಪ್ರತಿ ಹಳ್ಳಿ ಮತ್ತು ಪಟ್ಟಣಗಳಲ್ಲಿ ಏಜೆಂಟರುಗಳು ಬೇಕಾಗಿದ್ದಾರೆ. ಏಜೆಂಟರುಗಳಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತದೆ.

ನೇಮಕವಾದ ಏಜೆಂಟರುಗಳು ಕಂಪೆನಿಯಿಂದ ಗೊತ್ತಾದ ಸ್ಥಳಕ್ಕೆ ಮೂಳೆಗಳನ್ನು ಸಾಗಿಸಿ ಕೊಟ್ಟಲ್ಲು ಮಣ ಒಂದರ ರೂ. 0-12-0 ಯಂತೆ ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಈ ಕಳಗಿನ ವಿಳಾಸಕ್ಕೆ ಬರೆಯಿರಿ.

ಫ್ಯೇಜರ್‌ಪೇಟೆ,
ತಾ. 30-9-40.

ಕೆ. ಕೆ. ತಿಮ್ಮಯ್ಯ,
ಮೇನೇಜಿಂಗ್ ಡೈರೆಕ್ಟರ್.

ದಿ ಟ್ರೊಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:– ಲಾಲ ಶಂಕರ್ ಲಾಲ್.

ಮುಖ್ಯ ಖಚೇರಿ:– ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಆರ್ಗನೈಜರ್
ದಕ್ಷಿಣ ಕೊಡಗು, ಪೊನ್ನಂಪೇಟೆ.
ಅಥವಾ
ಯಂ. ಯು. ಅಚ್ಚಣ್ಣ,
ಏಜೆನ್ಸಿ ಸುಪರಿಂಟೆಂಡಂಟ್,
ಮಡಿಕೇರಿ, ಕೊಡಗು.

ಆರ್ಗನೈಜರ್
ಉತ್ತರ ಕೊಡಗು, ಮಡಿಕೇರಿ.
ಅಥವಾ
ಎಂ. ಎ. ಬೆಳ್ಯಪ್ಪ,
ಬ್ರಾಂಚ್ ಸೆಕ್ರೆಟರಿ,
ಹಂಪನಕಟ್ಟಾ, ಮಂಗಳೂರು.

ಕೊಡಗು ಪ್ರಾಂತೀಕ ಸಹಕಾರಿ, ಮೂರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245 ರ ವರೆಗೆ.
2. ·32 ರಿವಾಲ್ವರುಗಳು (Revolvers) ,, 262 ,, 274 ,,
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make) ಕ್ರಯ ರೂ. 627-5-0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52–28

ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ್ದಾವಾರ್ಷಿಕ ವರದಿಯ ಪ್ರಾಮುಖ್ಯಾಂಶಗಳು.

ಹೊಸ ಉದ್ಯಸು ರೂ. .... 6,13,00,000 ಸೋದೆ.
ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ. .... 27,73,00,000 ,,
ಒಟ್ಟು ನಿಧಿ. ರೂ. .... 8,30,00,000 ,,
ಸ್ಥಾಪನೆಯಾದಂದಿನಿಂದ ಪಾವತಿಯಾದ ಕ್ಲೈಮುಗಳು 10,96,00,000 ,,
1,28,000 ಕ್ಕೆ ಮೀರಿದ ತೃಪ್ತಿ ಪಡೆದ ಪಾಲಿಸಿದಾರರು.

ಶಕ್ತಿ. ಸೇವೆ ಭದ್ರತೆ.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

ರೋಶನ್‌ಲಾಲ್, ಜನರಲ್ ಮೇನೇಜರ್.

ಪ್ರಧಾನ ಕಛೇರಿ: ಎಂಪೈರ್ ಹೌಸ್, ಹಾರ್ನ್‌ಬಿ. ರೋಡ್, ಫೋರ್ಟ್, ಬೊಂಬಾಯಿ.

ಅಂಗ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.

CRESCENT

FOR PROTECTION AND SERVICE.

It is best to represent and insure with

The CRESCENT Insurance Co., Ltd,

H: O: BOMBAY.] *[Established 1919.*

For particulars write to:

Sri B. A. Poovaiah *Organiser* *Pollibetta, Coorg.*

or

The Branch Manager, *22 B. Mahatma Gandhi Road, Bangalore 1.*

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

ಭದ್ರತೆ! 17 ವರ್ಷಗಳ[illegible] ಅನುಕೂಲತೆ !!
ಅನುಭವಶೀಲ!!

ದಿ ವಿಜಯ ಬ್ಯಾಂಕ್ ಲಿಮಿಟೆಡ್

ಮುಖ್ಯ ಖಚೇರಿ,

ಕದ್ರಿ ರೋಡ್, ಮಂಗಳೂರು.

ನಿರಖು ಠೇವಣಾತಿ ಬಡ್ಡಿದರ:-

3	ತಿಂಗಳು	3%
6	,,	3½%
12	,,	3¾%
24	,,	4 %

ರೂಪಾಯಿ ೧೫,೦೦೦ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತಾ ¼% ಹೆಚ್ಚಿಗೆ.

ಶಾಖೆಗಳು:– ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮುಂಬಾಯಿ.

ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ.

ಎಲ್ಲಾ ವಿಧದ ಆಧುನಿಕ ಬ್ಯಾಂಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:– ಏಜಂಟ್,

ಮಡಿಕೇರಿ ಶಾಖೆ, ಮಡಿಕೇರಿ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ರಿಜಿಸ್ಟರ್ಡ್ ಆಫೀಸ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರ್ ಆಗಿದೆ. (1921ರಲ್ಲಿ ಸ್ಥಾಪಿಸಲ್ಪಟ್ಟಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,79,000.
ಕ್ಷೇಮನಿಧಿ	ರೂ.	55,000.
ಇತರ ನಿಧಿಗಳು	ರೂ.	28,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ವಿಚ್ಛಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸ್ಟಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀವಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,
ಕೆ. ಪಿ. ಅಪ್ಪಯ್ಯ M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

ಶ್ರೀ ಟಿ. ಎನ್. ಗೋವಿಂದರಾಜು, "ಕೊಡಗು" ಏಜಂಟರು, ವೀರಾಜಪೇಟೆ.

Edited, Printed and Published by P. I. Belliappa at 'Kodagu Press, Mercara, for 'Kodagu' Ltd.